

# ಭಗವದ್ಗೀತೆ ಮತ್ತು ಭಾಷ್ಯಗಳು

ಸ್ವಾಮಿ ಜಪಸಿದ್ಧಾನಂದ

ಗೀತೆ ಅತ್ಯಂತ ಸರಳವಾದ ಶೈಲಿಯ ಕೃತಿಯಾಗಿದ್ದರೂ, ವೇದಾಂತದಲ್ಲಿ ಅದಕ್ಕೆ ವಿಶಿಷ್ಟ ಸ್ಥಾನವಿರುವುದರಿಂದಲೂ ಅದು ಸಾಕ್ಷಾತ್ ಭಗವಂತನ ವಾಣಿ ಎಂದೇ ಪರಿಗಣಿತವಾಗಿರುವುದರಿಂದಲೂ ಅದರ ಮೇಲೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಖ್ಯಾನ, ಭಾಷ್ಯ , ಟೀಕೆಗಳು ರಚಿತವಾಗಿವೆ. ತತ್ತ್ವ ಹಾಗೂ ಸಂಪ್ರದಾಯಗಳ ನೆಲೆಯಲ್ಲಿ ಭಾಷ್ಯಗಳಿಗೆ ಹೆಚ್ಚಿನ ಮಹತ್ವವಿದೆ. ಈ ಕುರಿತು ವಿಶ್ಲೇಷಿಸಿರುವ ಲೇಖಕರು ಸಂಸ್ಕೃತದಲ್ಲಿ ವಿಶೇಷ ಪರಿಣತಿ ಹೊಂದಿದ್ದು, ಬೇಲೂರು ಮಠದಲ್ಲಿರುವ ವಿವೇಕಾನಂದ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**ಪ್ರಬಂಧದ ಉದ್ದೇಶ** : ಶ್ರೀಮದ್ಭಗವದ್ಗೀತೆಯ ವ್ಯಾಖ್ಯಾನ ಗ್ರಂಥಗಳ ಪರಿಚಯ ಈ ಪ್ರಬಂಧದ ಉದ್ದೇಶ. ಇದೊಂದು ಅಧ್ಯಯನ ರೂಪವಾದ ಬರಹ.

**ಪ್ರಬಂಧದ ಪ್ರಣಾಳಿ** : ಸಂಕಲನ ಪದ್ಧತಿಯಲ್ಲಿ ವಿಷಯವನ್ನು ಮಂಡಿಸುವ ಪ್ರಯಾಸವಿದು. 'ಎಮ್ ಎಲ್ ಎ' ಕ್ರಮದಂತೆ ಉಲ್ಲೇಖಗಳನ್ನು ನಿರ್ದೇಶಿಸಲಾಗಿದೆ. ಉದ್ಧರಿಸಿದ ನುಡಿಗಳ ಅನುವಾದ ಲೇಖಕರದ್ದೇ. ಉದ್ಧೃತಿಗಳಲ್ಲಿ ಬಂದ ಕರ್ಮಣಿ ಪ್ರಯೋಗಗಳನ್ನು ಕನ್ನಡಿಸುವಾಗ ಕರ್ತರಿ ಪ್ರಯೋಗವಾಗಿ ತರ್ಜುಮೆಗೈಯಲಾಗಿದೆ. ಸಂಸ್ಕೃತದಲ್ಲಿ ಪಳಗದವರು ಕರ್ಮಣಿ ವಾಕ್ಯದೊಡನೆ ಗುದ್ದಾಡುವಲ್ಲೇ ಬಲ ನೀಗಿದರೆ, ಇನ್ನು ವಾಕ್ಯದ ಅರ್ಥ ಅರಿಯುವುದು ಯಾವಾಗ! ತಿಳಿವಿನ ಸೌಕರ್ಯಕ್ಕೆ ಕನ್ನಡದ ಕರ್ತರಿ ಪ್ರಯೋಗವೇ ಲೇಸು. ಅಂತರ್ಜಾಲ (ಇಂಟರ್ನೆಟ್) ಮೂಲಗಳನ್ನೂ ಗ್ರಂಥಸೂಚಿಯ ಆರಂಭದಲ್ಲಿ ಕೃತಜ್ಞತೆಯಿಂದ ನಮೂದಿಸಲಾಗಿದೆ. ಗ್ರಂಥಾದಿ ಕಾಲ ನಿರ್ದೇಶ ಕ್ರಿಸ್ತಶಕದಲ್ಲಿ ಮಾಡಲಾಗಿದೆ.

## ೧. ಎಲ್ಲರ ಮಾತೆ ಭಗವದ್ಗೀತೆ

ವಿಶ್ವತೋಮುಖ ಸಂದೇಶಗಳ ಆಕರ ಶ್ರೀಮದ್ಭಗವದ್ಗೀತೆ. ಮಾನವ ವಿಕಾಸಕ್ಕಿರುವ ತತ್ತ್ವ ರಸಾಯನ ಗೀತಾವಚನ. ಎಲ್ಲರನ್ನೂ ಧನ್ಯರಾಗಿಸುವ ಉಪದೇಶಾಮೃತ ತುಂಬಿದ ಕಳಶ ಈ ಗ್ರಂಥ. ಯಾರು ಯಾವ ದೃಷ್ಟಿಯಿಂದ ಬಳಿ ಸಾರುವರೋ ಅವರು ಅಂಥ ಸಾರ ಗಳಿಸಿ ಬೆಳೆಯುವರು. ಧರ್ಮೋಪದೇಶ, ನೀತಿಬೋಧೆ, ಆಚಾರಸಂಹಿತೆ, ಅಧ್ಯಾತ್ಮ ವಿಚಾರ, ಪರತತ್ತ್ವ ವಿಮರ್ಶೆ, ಮುಕ್ತಿಸೋಪಾನ, ಯೋಗಮಾರ್ಗ, ಕರ್ಮರಹಸ್ಯ, ಭಕ್ತಿಮರ್ಮ, ಯುಕ್ತಿಮೀಮಾಂಸೆ, ರಾಷ್ಟ್ರೋದ್ಧಾರ ಕೌಶಲ, ಬದುಕಿನ ನಯ, ಯಶಸ್ಸಿನ ಕೀಲಿಕೈ ಎಲ್ಲವೂ ಅಡಗಿದೆ ಗೀತೆಯಲ್ಲಿ. ಮಾನವನ ಏಳ್ಗೆಗೆ ಬೇಕಾದ ಸಮಸ್ತವನ್ನೂ ಹೊತ್ತು ನಿಂತ ಮಾತೆ ಶ್ರೀಮದ್ಭಗವದ್ಗೀತೆ. ಜಗತ್ತಿನ ಸಕಲ ಪ್ರಧಾನ ಭಾಷೆಗಳಿಗೂ ಅನುವಾದಿತವಾದ ಗೀತೆ ಎಲ್ಲರಿಗೂ ಬೇಕಾದ ಕೃತಿರತ್ನ. ಇಂದು ಮ್ಯಾನೇಜ್ಮೆಂಟ್ ತಜ್ಞರೂ ಅದರಲ್ಲಿ ನಲ್ನುಡಿ ಕಂಡುಕೊಂಡರೆ ಅಚ್ಚರಿಯೇನಿಲ್ಲ. ಎಲ್ಲ ಕಸುಬಿಗೂ ಕಸುವನ್ನು ನೀಡಿದ ನಸುನಗೆಯ ಹಸುಗಾಹಿ ಉಸುರಿದ್ದು ಹುಸಿಯಾದೀತೆ. ಅದರಲ್ಲಿ ಸರ್ವತೋಮುಖ ನುಡಿಗಳಿರುವುದು ನಿಜವಾದರೂ, ವಸ್ತುತಃ ಗೀತೆ ಮೋಕ್ಷಶಾಸ್ತ್ರ ಎಂಬುದು ಬಲ್ಲಿದರ ಮತ. **ತಸ್ಯಾಸ್ಯ ಗೀತಾಶಾಸ್ತ್ರಸ್ಯ ಸಂಕ್ಷೇಪತಃ ಪ್ರಯೋಜನಮ್ - ಪರಂ ನಿಃಶ್ರೇಯಸಂ ಸಹೇತುಕಸ್ಯ ಸಂಸಾರಸ್ಯ ಅತ್ಯಂತೋಪರಮಲಕ್ಷಣಮ್** – 'ಈ ಗೀತಾಶಾಸ್ತ್ರದ ಫಲವನ್ನು ಅಡಕವಾಗಿ ಹೀಗೆ ಹೇಳಬಹುದು – ಬುಡ ಸಹಿತವಾಗಿ ಸಂಸಾರವು ಅಳಿದಾಗ ದಕ್ಕುವ ಮೋಕ್ಷ' ಎಂದು ಹೇಳುತ್ತಾರೆ ಶ್ರೀಶಂಕರಭಗವತ್ಪಾದರು *(ಗೀತಾ. ಭಾ–೧, ಪು.೧೨).*

## ೨. ಗೀತೆಯ ಸ್ವರೂಪ

ಜಯ ಎಂಬ ಹೆಸರಿನ ಇತಿಹಾಸವಾದ ಶ್ರೀಮನ್ಮಹಾಭಾರತದಲ್ಲಿ, ಶ್ರೀಕೃಷ್ಣ ಪರಮಾತ್ಮನ ಶ್ರೀಮುಖದಿಂದ ಹೊಮ್ಮಿದ ಉಪದೇಶವೇ ಶ್ರೀಮದ್ಭಗವದ್ಗೀತೆ. ಮಹಾಭಾರತದ ಭೀಷ್ಮ ಪರ್ವದ ೨೫ನೇ ಅಧ್ಯಾಯದಿಂದ ೪೦ನೇ ಅಧ್ಯಾಯದವರೆಗೆ ಹಮ್ಮಿಕೊಂಡಿರುವ ಗೀತೆಯಲ್ಲಿ ಒಟ್ಟು ೭೦೦ ಶ್ಲೋಕಗಳು. ಅವುಗಳಲ್ಲಿ

೫೭೪ ಶ್ಲೋಕಗಳು ಶ್ರೀಕೃಷ್ಣನ ನುಡಿಗಳು, ೮೪ ಮತ್ತು ಅರ್ಧ ಅರ್ಜುನನ ಮಾತುಗಳು, ೪೦ ಮತ್ತು ಅರ್ಧ ಸಂಜಯನ ವಚನ, ೧ ಧೃತರಾಷ್ಟ್ರನ ಹೇಳಿಕೆ. ಗೀತಾ ಸಂದೇಶ ಹದಿನೆಂಟು ಅಧ್ಯಾಯಗಳಲ್ಲಿ ವಿಂಗಡಿಸಲ್ಪಟ್ಟಿದೆ. ಭಗವದ್ರಾಮಾನುಜಾಚಾರ್ಯ, ಮಧುಸೂದನ ಸರಸ್ವತೀ ಮೊದಲಾದ ವ್ಯಾಖ್ಯಾನಕಾರರು ಗೀತೆಯನ್ನು ಆರು ಆರು ಅಧ್ಯಾಯಗಳ ಮೂರು ಷಟ್ಕಗಳಾಗಿ ವಿಂಗಡಿಸಿ ವಿವರಿಸಿದ್ದಾರೆ. ಮೊದಲ ಆರು ಅಧ್ಯಾಯಗಳಲ್ಲಿ ಕರ್ಮ, ಬಳಿಕ ಆರು ಅಧ್ಯಾಯಗಳಲ್ಲಿ ಭಕ್ತಿ, ತದನಂತರದ ಆರು ಅಧ್ಯಾಯಗಳಲ್ಲಿ ಜ್ಞಾನವನ್ನು ಪ್ರತಿಪಾದಿಸಲಾಗಿದೆ. ''**ತತ್ ತ್ವಮ್ ಅಸಿ**''ಎಂಬ ವೇದಾಂತ ಮಹಾವಾಕ್ಯದ ಮೂರು ಪದಗಳನ್ನು ಗೀತೆಯ ಈ ಮೂರು ಷಟ್ಕಗಳು ಕ್ರಮಶಃ ವಿವರಿಸಿವೆ ಎಂಬ ಮಾತೂ ಉಂಟು. ಪ್ರತಿಯೊಂದು ಅಧ್ಯಾಯವೂ ಯೋಗ ಎನಿಸಿದೆ. ಜೀವನದ ಪರಮ ಗುರಿಗಾಣಿಸಬಲ್ಲ ಉಪಾಯವನ್ನು ಯೋಗ ಎನ್ನುತ್ತಾರೆ. ದುಃಖ ಶೋಕಗಳು ಮೋಹ ಸರಪಳಿಯನ್ನು ಸಡಿಲಗೊಳಿಸುವುದರಿಂದ, ಮೊದಲನೇ ಅಧ್ಯಾಯವೂ (ಅರ್ಜುನನ ಶೋಕದ ವಿವರಣೆ ಉಳ್ಳದ್ದೂ) ಯೋಗ ಎನಿಸಿದೆ. ಜೀವವು ಕೊರಗಿ ಕುಗ್ಗಬೇಕು ಎಂಬುದು ಇದರ ಅರ್ಥವಲ್ಲ. ಅನಿವಾರ್ಯವಾಗಿ ಅಡರಿಕೊಂಡ ಖೇದವನ್ನು ಭಗವಂತನೆಡೆ ಸಾರಲು ಬಳಸಿಕೊಳ್ಳಬೇಕು ಎಂಬುದು ತಾತ್ಪರ್ಯ.

### ೩. ಗೀತಾ ಶ್ಲೋಕ ಸಂಖ್ಯೆ

ಗೀತೆಯಲ್ಲಿ ೭೦೦ ಶ್ಲೋಕಗಳು ಎಂಬುದು ಸಾಮಾನ್ಯ ತಿಳಿವಳಿಕೆ. ಕಾಶ್ಮೀರ ಸಂಪ್ರದಾಯದ ಆಚಾರ್ಯರಾದ ಕೇಶವ, ಆನಂದ ವರ್ಧನ, ಅಭಿನವ ಗುಪ್ತ, ರಾಜಾನಕ, ರಾಮಕಂಠ ಮುಂತಾದವರ ಪ್ರಕಾರ ೭೪೫ ಶ್ಲೋಕಗಳಿಂದ ಕೂಡಿದ್ದು ಗೀತೆ. ಶ್ರೀಮನ್ಮಧ್ವ ಸಂಪ್ರದಾಯದಲ್ಲಿ ೭೦೧ ಶ್ಲೋಕಗಳು ರೂಢಿಯಲ್ಲಿವೆ. ಪ್ರಾಚೀನ ತಾಳೆಗರಿಗಳಲ್ಲಿ ೭೦೦ಕ್ಕಿಂತ ಹೆಚ್ಚಿನ ಶ್ಲೋಕಗಳು ಸಿಕ್ಕಿರುವುದರಿಂದ ಹೀಗೆ ಪಾಠಭೇದ ಇದೆಯಾದರೂ ಮೂಲ ಅರ್ಥದಲ್ಲೇನೂ ವ್ಯತ್ಯಾಸವಿಲ್ಲ ಎಂಬುದೇ ವಿದ್ವಾಂಸರ ಅಭಿಪ್ರಾಯ. ಇದಲ್ಲದೆ, ಸಹಸ್ರಾರು ತಾಳೆಗರಿ ಗ್ರಂಥಗಳು ವಿದೇಶೀಯರ ಆಕ್ರಮಣದಿಂದಾಗಿ ಹಲವು ಬಾರಿ ನಾಶಗೊಂಡಿವೆ ಎಂಬುದನ್ನು ನೆನಪಿಟ್ಟುಕೊಂಡಾಗ ಗೀತೆಯ ವಿವಿಧ ಪಾಠಗಳು ಇದ್ದಿರುವ ಸಾಧ್ಯತೆ ಸ್ಪಷ್ಟವಾಗುತ್ತದೆ.

೭೦೦ ಶ್ಲೋಕಗಳ ಪರಂಪರೆ ಶ್ರೀಶಂಕರಾಚಾರ್ಯರಿಂದ ನಮಗೆ ಖಚಿತವಾದದ್ದು. **ತಂ ಧರ್ಮಂ ಭಗವತಾ ಯಥೋಪದಿಷ್ಟಂ ವೇದವ್ಯಾಸಃ ಸರ್ವಜ್ಞಃ ಭಗವಾನ್ ಗೀತಾಖ್ಯೈಃ ಸಪ್ತಭಿಃ ಶ್ಲೋಕಶತಕೈಃ ಉಪನಿಬಬಂಧ** *(ಗೀತಾ. ಭಾ-೧, ಪುಪು. ೧೦-೧೧)* – 'ಭಗವಂತನಿಂದ ಉಪದಿಷ್ಟವಾದ ಧರ್ಮವನ್ನು ಸರ್ವಜ್ಞರಾದ ಭಗವಾನ್ ವೇದವ್ಯಾಸರು ಗೀತೆಯೆಂಬ ಹೆಸರಿನ ೭೦೦ ಶ್ಲೋಕಗಳಲ್ಲಿ ಬರೆದರು' ಎನ್ನುತ್ತಾರೆ ಶ್ರೀಶಂಕರರು. ಹೀಗಾಗಿ ಜನರಲ್ಲಿ ವ್ಯಾಪಕವಾಗಿ ಈ ಅಭಿಮತವೇ ನೆಲೆಯೂರಿದೆ.

### ೪. ಗೀತೆಯಲ್ಲಿನ ಅಧ್ಯಾಯಗಳು

ಗೀತೆಯಲ್ಲಿ ಒಟ್ಟು ಹದಿನೆಂಟು ಅಧ್ಯಾಯಗಳು. ಅವುಗಳ ಹೆಸರಿನ ವಿಷಯದಲ್ಲೂ ಒಮ್ಮತವಿಲ್ಲ. ಸಾಮಾನ್ಯವಾಗಿ ಜಾರಿಗೆ ಬಂದುದನ್ನು, ನೆನಪಿನ ನೆರವಿಗಾಗಿ, ಅಧ್ಯಾಯದ ಮುಖ್ಯ ವಿಷಯದೊಡನೆ ಈ ಕೆಳಗೆ ನೀಡಲಾಗಿದೆ:

**ಗೀತಾಧ್ಯಾಯ ಕೋಷ್ಟಕ**

| ಅಧ್ಯಾಯದ ಸಂಖ್ಯೆ | ಅಧ್ಯಾಯದ ಹೆಸರು | ಅಧ್ಯಾಯದಲ್ಲಿ ವರ್ಣಿತವಾದ ಮುಖ್ಯ ವಿಷಯ | ಶ್ಲೋಕ ಸಂಖ್ಯೆ |
|---|---|---|---|
| ೧ | ಅರ್ಜುನ-ವಿಷಾದ-ಯೋಗಃ | ಶೋಕ ಮೋಹಗಳಿಂದ ಕಂಗಾಲಾದ ಜೀವಿ ಭಗವಂತನ ಕಡೆ ತಿರುಗುವ ಪ್ರಕ್ರಿಯೆ. | ೪೭ |
| ೨ | ಸಾಂಖ್ಯ-ಯೋಗಃ | ಆತ್ಮವಿದ್ಯೆಯನ್ನು ಅವಲಂಬಿಸಿ ಕರ್ತವ್ಯ ಪರಿಪಾಲನೆ. ಆತ್ಮನಲ್ಲಿ ಬುದ್ಧಿ ಸ್ಥಿರಗೊಂಡವರ ಲಕ್ಷಣ. | ೭೨ |
| ೩ | ಕರ್ಮ-ಯೋಗಃ | ಅಹಂಕಾರ ಮಮಕಾರವಿಲ್ಲದ ಕಾಯಕ ಮುಕ್ತಿಗೆ ದಾರಿ. ಕಾಮಾದಿಗಳನ್ನು ಹದ್ದುಬಸ್ತಿನಲ್ಲಿಡುವ ಉಪಾಯ. | ೪೩ |
| ೪ | ಜ್ಞಾನ-ಕರ್ಮ-ಸಂನ್ಯಾಸ-ಯೋಗಃ / ಜ್ಞಾನಯೋಗಃ | ಎಲ್ಲ ಕೆಲಸವನ್ನೂ ಯಜ್ಞ (ಪೂಜೆ) ಎಂದರಿತು ಮಾಡುತ್ತ ಬ್ರಹ್ಮ-ಭಾವದಲ್ಲಿ ಬದುಕುವ ಮರ್ಮ. ಜ್ಞಾನ ಮಹಿಮೆಯ ನಿರೂಪಣೆ. | ೪೨ |
| ೫ | ಕರ್ಮ-ಸಂನ್ಯಾಸ-ಯೋಗಃ | ತಾವರೆ ಎಲೆಯಂತೆ, ದೋಷ ಸೋಂಕದಂತೆ ಕೆಲಸ ಮಾಡುವ ಕೌಶಲ. ಸಮದರ್ಶನದಿಂದ ಬ್ರಹ್ಮಾನುಭವ. | ೨೯ |

| ಅಧ್ಯಾಯ ಸಂಖ್ಯೆ | ಅಧ್ಯಾಯದ ಹೆಸರು | ಅಧ್ಯಾಯದಲ್ಲಿ ವರ್ಣಿತವಾದ ಮುಖ್ಯ ವಿಷಯ | ಶ್ಲೋಕ ಸಂಖ್ಯೆ |
|---|---|---|---|
| ೬ | ಆತ್ಮ-ಸಂಯಮ-ಯೋಗಃ / ಧ್ಯಾನಯೋಗಃ | ಮನಸ್ಸನ್ನು ನಿಗ್ರಹಿಸಿ ಧ್ಯಾನ ಮಾಡುವ ಗುಟ್ಟು. ಪ್ರಯತ್ನಶೀಲನ ಜನ್ಮಾಂತರ ವಿಚಾರ. | ೪೭ |
| ೭ | ಜ್ಞಾನ-ವಿಜ್ಞಾನ-ಯೋಗಃ | ಭಗವಂತನ ಎರಡು ಬಗೆಯ ಪ್ರಕೃತಿಯ (ಆವಿರ್ಭಾವದ) ವರ್ಣನೆ. ಎಲ್ಲದರಲ್ಲೂ ಭಗವಂತನ ಇರವು. ನಾಲ್ಕು ಬಗೆಯ ಭಕ್ತರು. | ೩೦ |
| ೮ | ಅಕ್ಷರ-ಬ್ರಹ್ಮ-ಯೋಗಃ | ಹುಟ್ಟು ಸಾವಿನ ಸುಳಿಯಿಂದ ಪಾರಾಗುವ ಪರಿ. ಸಾವಿನ ಆಚೆ ಇರುವ ಎರಡು ದಾರಿಗಳು. | ೨೮ |
| ೯ | ರಾಜವಿದ್ಯಾ-ರಾಜಗುಹ್ಯ-ಯೋಗಃ | ಎಲ್ಲರಲ್ಲೂ ದೇವನಿದ್ದಾನೆ, ದೇವನಲ್ಲೇ ಎಲ್ಲವೂ ಇದೆ ಎಂದರಿತು, ಮಾಡಿದ್ದೆಲ್ಲವನ್ನೂ ಅವನಿಗರ್ಪಿಸಿ ಮುಕ್ತನಾಗುವ ಕೌಶಲ. | ೩೪ |
| ೧೦ | ವಿಭೂತಿ-ಯೋಗಃ | ದೇವರ ಅಂಶವೇ ಜೀವ ಜಡ ಎಲ್ಲದರಲ್ಲೂ ಅತ್ಯುತ್ತಮ ತಳಿಯಾಗುತ್ತದೆ. ಬುದ್ಧಿಯೋಗದಿಂದ ಅವನ ಪ್ರಾಪ್ತಿ. | ೪೨ |
| ೧೧ | ವಿಶ್ವರೂಪದರ್ಶನ-ಯೋಗಃ | ದೇವನ ವಿರಾಟ್ ರೂಪವನ್ನು ನೆನೆದು, ತಾನೊಂದು ನೆಪ ಮಾತ್ರ ವೆಂದರಿತು ಕರ್ತವ್ಯ ಪಾಲಿಸುವ ಆಣತಿ. | ೫೫ |
| ೧೨ | ಭಕ್ತಿ-ಯೋಗಃ | ಭಕ್ತಿ ಮಾರ್ಗದ ಹಂತಗಳು. ಆದರ್ಶ ಭಕ್ತನ ಲಕ್ಷಣ. | ೨೦ |
| ೧೩ | ಕ್ಷೇತ್ರ-ಕ್ಷೇತ್ರಜ್ಞ-ವಿಭಾಗ-ಯೋಗಃ | ಶರೀರ ಮತ್ತು ಅದರ ಒಡೆಯನಾದ ಜೀವರೂಪಿ ಭಗವಂತ. ಜ್ಞಾನಾರ್ಹತೆ. ಪ್ರಕೃತಿ ಪುರುಷ ನಿರೂಪಣೆ. | ೩೪ |
| ೧೪ | ಗುಣ-ತ್ರಯ- ವಿಭಾಗ-ಯೋಗಃ | ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳ ವರ್ಣನೆ. ಈ ಮೂರನ್ನೂ ಮೀರಿ ನಿಂತವನ ಗುಣ ಲಕ್ಷಣ | ೨೭ |
| ೧೫ | ಪುರುಷೋತ್ತಮ-ಯೋಗಃ | ಸಂಸಾರವೆಂಬ ಅರಳಿ ಮರದ ಬಣ್ಣನೆ. ಜೀವಾತ್ಮ ವರ್ಣನೆ. ಕ್ಷರ ಅಕ್ಷರ ಪುರುಷೋತ್ತಮ ಭಗವಂತನ ನಿರೂಪಣೆ. | ೨೦ |
| ೧೬ | ದೈವಾಸುರ-ಸಂಪದ್-ವಿಭಾಗ-ಯೋಗಃ | ದಿವ್ಯ ಗುಣಗಳ ಮತ್ತು ಕೆಟ್ಟ ಸ್ವಭಾವಗಳ ವಿವರ. ಶಾಸ್ತ್ರದ ಆಣತಿಯಂತೆ ಬದುಕುವ ಆದೇಶ. | ೨೪ |
| ೧೭ | ಶ್ರದ್ಧಾತ್ರಯ-ವಿಭಾಗ ಯೋಗಃ | ಶ್ರದ್ಧೆ, ಆಹಾರ, ಯಜ್ಞ, ತಪಸ್ಸು, ದಾನಗಳಲ್ಲಿ ಮೂರು ವಿಧ. ಓಂ ತತ್ ಸತ್ ಎಂಬ ಬ್ರಹ್ಮದ ಹೆಸರುಗಳ ಪ್ರಯೋಗ ವಿವರ. | ೨೮ |
| ೧೮ | ಮೋಕ್ಷಸಂನ್ಯಾಸ-ಯೋಗಃ | ಜ್ಞಾನ, ಕರ್ಮ, ಕರ್ತ, ಬುದ್ಧಿ, ಧೃತಿ (ತಾಕತ್ತು), ಸುಖಗಳ ಮೂರು ಬಗೆ. ಬ್ರಾಹ್ಮಣಾದಿಗಳ ಸ್ವಭಾವ. ಜ್ಞಾನಕ್ಕೆ ಅರ್ಹತೆ. ವೇದಾಂತವನ್ನೆಲ್ಲ ಬಟ್ಟಿ ಇಳಿಸಿದಂಥ ಕೊನೆಯ ಮಾತು. ಗೀತೆಯ ಹಿರಿಮೆ. | ೭೮ |

### ೫. ಗೀತೆಯ ಗರಿಮೆ

ಜ್ಞಾನಿಗಳು ಗೀತಾ ಮಾಹಾತ್ಮ್ಯವನ್ನು ಬಗೆಬಗೆಯಿಂದ ಬಣ್ಣಿಸಿದ್ದಾರೆ. ಸ್ವಯಂ ಗೀತಾಚಾರ್ಯನೇ ಹದಿನೆಂಟನೇ ಅಧ್ಯಾಯದಲ್ಲಿ ಗೀತೆಯ ಹಿರಿಮೆಯನ್ನು ಹಾಡಿದ್ದಾನೆ. ''**ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ । ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥**'' – 'ಯಾರು ನಮ್ಮೀರ್ವರ ಈ ಧರ್ಮಬದ್ಧ ಮಾತುಗಳನ್ನು ಅಧ್ಯಯನ ಮಾಡುವರೋ ಅವರು, ಆ (ಗೀತಾಧ್ಯಯನ ರೂಪ) ಜ್ಞಾನಯಜ್ಞದಿಂದ ನನ್ನನ್ನು ಪೂಜಿಸಿದ್ದಾರೆ ಎಂದೇ ಬಗೆಯುವೆನು' *(ಗೀತಾ. ಭಾ-೨, ಪು.೧೦೧೨)* ಎಂಬ ಶ್ರೀಕೃಷ್ಣನ ನುಡಿ ಸ್ಮರಣೀಯ. ಪುರಾಣಗಳೂ ಗೀತೆಯನ್ನು ಎತ್ತಿಹಿಡಿದಿವೆ. ''**ಗೀತಾಯಾಃ ಪುಸ್ತಕಂ ಯತ್ರ ಯತ್ರ ಪಾಠಃ ಪ್ರವರ್ತತೇ । ತತ್ರ ಸರ್ವಾಣಿ ತೀರ್ಥಾನಿ ಪ್ರಯಾಗಾದೀನಿ ತತ್ರ ವೈ ॥**'' – 'ಎಲ್ಲಿ ಗೀತಾ ಪುಸ್ತಕವಿದೆಯೊ, ಎಲ್ಲಿ ಗೀತಾ ಪಠಣ ನಡೆವುದೊ ಅಲ್ಲಿ ಪ್ರಯಾಗಾದಿ ಎಲ್ಲ ತೀರ್ಥಗಳೂ ನೆಲೆಸಿರುತ್ತವೆ' *(ಸಾಧಕೀ. ಭಾ-೧, ಪು.೧೬)* ಎಂಬುದು ಪರಂಪರೆಯಾಗಿ ಬಂದ ಪುರಾಣೋಕ್ತಿ. ಪದ್ಮಪುರಾಣ

ವಂತೂ ಅಧ್ಯಾಯಶಃ ಗೀತೆಯ ಮೇಲ್ಮೆಯನ್ನು ಎತ್ತಿ ಹಿಡಿದಿದೆ. ಸ್ವಾಮಿ ವಿವೇಕಾನಂದರು ''ಗೀತೆಯು ಉಪನಿಷತ್ತುಗಳ ಮೇಲಿನ ಭಾಷ್ಯ'' ಎಂದಿದ್ದಾರೆ.

### ೬. ಗೀತಾರ್ಥ ಚಿಂತನ

ಗೀತೆಯನ್ನು ವಿವರಿಸುವ ಪ್ರಯಾಸ ಹೊಸತೇನಲ್ಲ. ಸಹಸ್ರಾರು ಸಂವತ್ಸರಗಳಿಂದ ಸಂತರು ಗೀತಾ ಸಾರವನ್ನು ಸಾರಿದ್ದಾರೆ. ಈಗ ಸಿಗುವ ವಿವರಣೆಗಳಲ್ಲಿ ಅತ್ಯಂತ ಹಳೆಯದು ಮತ್ತು ಹಿರಿದು ಶ್ರೀಶಂಕರ-ಭಗವತ್ಪಾದಾಚಾರ್ಯರ ಶ್ರೀಮದ್ಭಗವದ್ಗೀತಾ ಭಾಷ್ಯ. ಸ್ವಯಂ ಶ್ರೀಶಂಕರರು, ತಮಗೆ ಮುಂಚೆಯೂ ಗೀತಾ ವ್ಯಾಖ್ಯಾನಗಳಿದ್ದವು ಎಂದು ಭಾಷ್ಯದ ಪೀಠಿಕೆಯಲ್ಲಿ ಹೇಳಿರುವುದು ಗಮನಾರ್ಹ.[೧] ಶ್ರೀಶಂಕರರ ನಂತರ ಬಂದ ಎಲ್ಲ ಆಚಾರ್ಯರೂ ತಂತಮ್ಮ ಸಿದ್ಧಾಂತವನ್ನು ಪ್ರತಿಷ್ಠಾಪಿಸಲು ಗೀತೆಗೆ ವಿವರಣೆ ಬರೆದರು. ಮಧ್ಯಯುಗದ ನಂತರ ಬಂದ ಅನೇಕ ವಿದ್ವಾಂಸರೂ ವ್ಯಾಖ್ಯಾನಗಳನ್ನು ಬರೆದು ಗೀತಾವಾಙ್ಮಯವನ್ನು ವೃದ್ಧಿಗೊಳಿಸಿದ್ದಾರೆ. ಮೊಗಲರ ಶಾಸನ ಕಾಲದಲ್ಲಿ ಗೀತೆಯು ಪಾರಸಿಗೆ ಭಾಷಾಂತರಗೊಂಡಿತು. ಚಾರ್ಲ್ಸ್ ವಿಲ್ಕಿನ್ಸ್ ಎಂಬವನು ೧೭೮೫ನೇ ಇಸವಿಯಲ್ಲಿ ಮೊಟ್ಟಮೊದಲು ಆಂಗ್ಲಕ್ಕೆ ತರ್ಜುಮೆ ಮಾಡಿದ ಬಳಿಕ, ಬಹು ಬೇಗ ಫ್ರೆಂಚ್, ಜರ್ಮನ್, ರಷ್ಯನ್ ಮುಂತಾದ ನುಡಿಗಳಲ್ಲೂ ಗೀತಾನುವಾದ ಕಾಣಿಸಿಕೊಂಡಿತು. ೧೯ನೇ ಶತಮಾನದ, ಇಂಗ್ಲೆಂಡಿನ ಎಡ್ವಿನ್ ಅರ್ನಾಲ್ಡ್ ಶ್ರೀಮದ್ಭಗವದ್ಗೀತೆಯನ್ನು 'ದಿ ಸಾಂಗ್ ಸೆಲೆಸ್ಟಿಯಲ್' ಎಂಬ ಹೆಸರಿನಲ್ಲಿ ಪದ್ಯಾನುವಾದ ಮಾಡಿದ್ದಾನೆ. ಇಂದು ಭಾರತದಲ್ಲಿ ಮಾತ್ರವಲ್ಲದೆ ಹೊರರಾಷ್ಟ್ರಗಳಲ್ಲೂ ಗೀತಾರ್ಥ ಚಿಂತನ ನಡೆದಿದೆ. ೨೦ನೇ ಶತಮಾನದ, ಮಧ್ಯಪ್ರದೇಶದ ಚಿತ್ರಕೂಟದಲ್ಲಿನ ಸ್ವಾಮಿ ರಾಮಭದ್ರಾಚಾರ್ಯರು ಮೊಟ್ಟಮೊದಲ ಬಾರಿಗೆ ಬ್ರೇಲ್ ಲಿಪಿಯಲ್ಲಿ ಗೀತೆಯನ್ನು ಹೊರತಂದರು. ಹೀಗಾಗಿ ನೇತ್ರಶಕ್ತಿ ಹೀನರೂ ಗೀತೆಯಿಂದ ವಂಚಿತರಲ್ಲ. ಇಂದು ಸಮಗ್ರ ಜಗತ್ತು ಗೀತಾಮೃತ ಪಾನ ಪಿಪಾಸುವಾಗಿದೆ.

### ೭. ವ್ಯಾಖ್ಯಾನ ಪದ್ಧತಿ

ಸಂಸ್ಕೃತ ವಾಙ್ಮಯದಲ್ಲಿ ವ್ಯಾಖ್ಯಾನ ಕೃತಿಗಳದ್ದೇ ಒಂದು ಪ್ರತ್ಯೇಕ ಕ್ಷಿತಿಜ. ಮೂಲ ಬರಹಗಾರರಿಗೆ ಸರಿತೂಗುವ ಅರಿಮೆ ಹಿಂದಿನ ವ್ಯಾಖ್ಯಾನಕಾರರದು. ಮೂಲ ಕೃತಿಯನ್ನು ಓದುವಷ್ಟೇ ಆವಶ್ಯಕ ಮತ್ತು ಮೌಲ್ಯಪೂರ್ಣ ವ್ಯಾಖ್ಯಾನಗಳ ವ್ಯಾಸಂಗ. ಭಾಷ್ಯ, ವಾರ್ತಿಕ, ಟೀಕೆ, ಟಿಪ್ಪಣಿ (ಅಥವಾ ಟಿಪ್ಪಣ) ಇತ್ಯಾದಿಯಾಗಿ ವ್ಯಾಖ್ಯಾನ ಹಲವು ಬಗೆಯದು. ಭಾಷ್ಯಕಾರರು ಬಿಡಿಸಿದರೂ ಬಿಟ್ಟುಕೊಳ್ಳದೇ ಉಳಿದುದನ್ನು ಬಿತ್ತರಿಸುವ ಯತ್ನ ಟೀಕೆ. ಟೀಕೆಯ ಅರ್ಥ ವಿವರಣೆ ಟಿಪ್ಪಣಿ. ಕೆಲವೊಮ್ಮೆ ಟೀಕೆ ಟಿಪ್ಪಣಿಗಳು ನೇರವಾಗಿ ಮೂಲವನ್ನೇ ವಿವರಿಸುವುದೂ ಉಂಟು. ಹೀಗೆ ವೈವಿಧ್ಯಮಯ ವ್ಯಾಖ್ಯಾನ ಸಾಹಿತ್ಯ. ಇವುಗಳ ಶಾಸ್ತ್ರೀಯ ನಿರ್ವಚನ ಹೀಗಿವೆ:

**ಭಾಷ್ಯಮ್** – ''ಸೂತ್ರಾರ್ಥೋ ವರ್ಣ್ಯತೇ ಯೇನ ಪದೈಃ ಸೂತ್ರಾನುಸಾರಿಭಿಃ । ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ॥'' *(ಝಳಕೀಕರ. ಪು.೬೨೭)* – ಮೂಲ ಗ್ರಂಥದ ಅರ್ಥ ವಿವರಿಸುತ್ತ, ವಿವರಣೆಯಲ್ಲಿ ಬಂದ ಕಠಿಣ ಶಬ್ದಗಳನ್ನೂ ಬಿಡಿಸಿ ಹೇಳುತ್ತ, ಗ್ರಂಥಕರ್ತರ ಇಂಗಿತವನ್ನು ನಿಚ್ಚಳಗೊಳಿಸಿ ತನ್ನ ನಿಲುವನ್ನು ಗಟ್ಟಿಗೊಳಿಸುವ ಕೃತಿ ಭಾಷ್ಯ ಎನಿಸುತ್ತದೆ.

**ವಾರ್ತಿಕಮ್** – ''ಉಕ್ತಾನುಕ್ತ-ದುರುಕ್ತಾನಾಂ ಚಿಂತಾ ಯತ್ರ ಪ್ರವರ್ತತೇ । ತಂ ಗ್ರಂಥಂ ವಾರ್ತಿಕಂ ಪ್ರಾಹುರ್ವಾರ್ತಿಕಜ್ಞಾ ಮನೀಷಿಣಃ ॥'' ಎನ್ನುತ್ತದೆ ಪರಾಶರ ಪುರಾಣ. ಅದರ ಭಾವಾರ್ಥ: ಮೂಲದಲ್ಲಿ ಹೇಳಿದ, ಹೇಳದೇ ಬಿಟ್ಟ, ಅಥವಾ ಹೇಳಿದರೂ ತಿಳಿಯದ್ದನ್ನು ತಿಳಿಯಾಗಿಸುವ ತಳಿ ವಾರ್ತಿಕ. ವಾರ್ತಿಕಗಳು ಶ್ಲೋಕರೂಪದಲ್ಲಿರುತ್ತವೆ. ಉದಾಹರಣೆಗೆ – ಶ್ರೀಶಂಕರರ ತೈತ್ತಿರೀಯ ಹಾಗು ಬೃಹದಾರಣ್ಯಕ ಉಪನಿಷತ್ತಿನ ಭಾಷ್ಯಗಳಿಗೆ ಶ್ರೀಸುರೇಶ್ವರಾಚಾರ್ಯರ ವಾರ್ತಿಕಗಳು.

**ಟೀಕಾ** – ''ಮೂಲಗ್ರಂಥಸ್ಯ ಅಪ್ರತಿಪತ್ತಿ-ವಿಪ್ರತಿಪತ್ತಿ-ಅನ್ಯಥಾಪ್ರತಿಪತ್ತಿ-ನಿವಾರಣೇನ ತತ್ಕರ್ತುಃ ಅಭಿಪ್ರೇತಾರ್ಥಸ್ಯ ಶಬ್ದಾಂತರೇಣ ವಿವರಣಮ್'' *(ಝಳಕೀಕರ. ಪು.೩೦೬).* ಅರಿವಾಗದಿರುವುದು, ವಿರುದ್ಧವಾಗಿ ತೋರುವುದು, ಮೂಲಕ್ಕಿಂತ ಬೇರೆಯಾಗಿ ಕಾಣಬರುವುದು – ಎಂಬ ಈ ದೋಷಗಳನ್ನು ದೂರಾಗಿಸಿ, ಮೂಲ ಬರಹಗಾರರ ಅಭಿಪ್ರಾಯವನ್ನು ಬೇರೆ ಶಬ್ದಗಳಿಂದ ವಿವರಿಸುವುದೇ ಟೀಕಾ ಗ್ರಂಥ. ಉದಾಹರಣೆಗೆ – ಪತಂಜಲಿ ಮಹರ್ಷಿಗಳ ವ್ಯಾಕರಣ ಮಹಾಭಾಷ್ಯಕ್ಕೆ ಕೈಯಟನ ಭಾಷ್ಯಪ್ರದೀಪಟೀಕಾ. ಶ್ರೀಶಂಕರರ ಗೀತಾಭಾಷ್ಯಕ್ಕೆ ಆನಂದಗಿರಿಗಳ ವ್ಯಾಖ್ಯೆ ಇತ್ಯಾದಿ.

**ಟಿಪ್ಪನೀ** – ''ಟೀಕಾಯಾಷ್ಟೀಕಾ. ಸಾ ಚ ಟೀಕಾವ್ಯಾಖ್ಯಾರೂಪತಯೈವ ವ್ಯವಹ್ರಿಯತೇ'' *(ಝಳಕೀಕರ. ಪು.೩೦೬).* ಟೀಕೆಯ ವಿವರಣೆಯೇ ಟಿಪ್ಪನೀ (ಕನ್ನಡದಲ್ಲಿ ಟಿಪ್ಪಣಿ) ಎನಿಸಿದೆ. ಉದಾಹರಣೆಗೆ – ಪತಂಜಲಿ ಮಹರ್ಷಿಗಳ ವ್ಯಾಕರಣ ಮಹಾಭಾಷ್ಯಕ್ಕೆ ಕೈಯಟ ಬರೆದ ಭಾಷ್ಯಪ್ರದೀಪಟೀಕೆಗೆ ಮಹಾಮತಿ ನಾಗೇಶ ಭಟ್ಟ ಬರೆದ ಪ್ರದೀಪೋದ್ಯೋತ ಟಿಪ್ಪಣಿಯ ಗುಂಪಿಗೆ ಸೇರಿದ್ದು.

### ೮. ಗೀತಾ ವ್ಯಾಖ್ಯಾನಗಳು

ಗೀತೆಗಿರುವಷ್ಟು ವ್ಯಾಖ್ಯಾನಗಳು ಮತ್ತಾವ ಗ್ರಂಥಕ್ಕೂ ಇಲ್ಲ. ಸ್ವರೂಪ, ಶೈಲಿ, ಭಾಷೆ, ದೇಶ, ಕಾಲ, ಸಿದ್ಧಾಂತ ಎಂಬಿವೇ ಮೊದಲಾಗಿ ಹಲವು ಬಗೆಯಿಂದ ಈ ವ್ಯಾಖ್ಯಾನಗಳನ್ನು ವಿಂಗಡಿಸ

೧...ತದರ್ಥಾವಿಷ್ಕರಣಾಯ ಅನೇಕೈಃ ವಿವೃತಪದಪದಾರ್ಥವಾಕ್ಯಾರ್ಥ-ನ್ಯಾಯಮಪಿ... *(ಗೀತಾ. ಭಾ-೧, ಪು.೧೧)*

ಬಹುದು. ಪದ್ಯರೂಪದಲ್ಲೂ ಗೀತಾವ್ಯಾಖ್ಯಾನವಿದೆ. ಶ್ರೀಶಂಕರರೇ ಮೊದಲಾದ ಜ್ಞಾನಿಗಳು ಗದ್ಯರೂಪದಲ್ಲಿ ವಿವರಿಸಿದರೆ, ಸಂತ ಜ್ಞಾನೇಶ್ವರರೇ ಮುಂತಾದವರು ಪದ್ಯರೂಪದಲ್ಲಿ ಹಾಡಿದ್ದಾರೆ. ಕವಿಗಳೂ ಈ ನಿಟ್ಟಿನಲ್ಲಿ ಮುಂದೆ ಬಂದಿದ್ದಾರೆ. ದೈವಜ್ಞ ಸೂರ್ಯ ಪಂಡಿತನು ಕಾವ್ಯರೂಪದಲ್ಲಿ ವಿವರಿಸಿದ್ದಾನೆ. ಅವನ ರಾಮ-ಕೃಷ್ಣ-ವಿಲೋಮ-ಕಾವ್ಯ ಮುಂದಿನಿಂದ ಓದಿದರೆ ರಾಮಾಯಾಣ, ಹಿಂದು ಮುಂದಾಗಿ ಓದಿದರೆ ಮಹಾಭಾರತದ ಅರ್ಥ ಕೊಡುತ್ತದೆ. ಅಧ್ಯಯನ ಸೌಕರ್ಯಕ್ಕಾಗಿ ಸಂಸ್ಕೃತ, ಸಂಸ್ಕೃತೇತರ ಎಂದು ಎರಡು ವಿಭಾಗ ಮಾಡಿಕೊಳ್ಳಬಹುದು.

## ಗೀತೆಯ ಸಂಸ್ಕೃತ ವ್ಯಾಖ್ಯಾನಗಳು

| ಕ್ರಮ | ವ್ಯಾಖ್ಯಾಕಾರರ ಹೆಸರು | ಕಾಲ | ದೇಶ | ವ್ಯಾಖ್ಯೆಯ ಹೆಸರು | ಸಂಪ್ರದಾಯ |
|---|---|---|---|---|---|
| ೧. | ಶಂಕರಾಚಾರ್ಯ | ೮ ನೇ | ಕಾಲಡಿ, ಕೇರಳ | ಶ್ರೀಮದ್ಭಗವದ್ಗೀತಾಭಾಷ್ಯ | ಅದ್ವೈತ |
| ೨. | ಭಾಸ್ಕರಾಚಾರ್ಯ | ೯ ನೇ | ಕಾಶ್ಮೀರ | | ಶೈವಾದ್ವೈತ |
| ೩. | ಆನಂದ ರಾಜಾನಕ | ೯ ನೇ | ಕಾಶ್ಮೀರ | ಆನಂದೀ | |
| ೪. | ರಾಜಾನಕ ರಾಮಕಂಠ | ೯ ನೇ | ಕಾಶ್ಮೀರ | ಸರ್ವತೋಭದ್ರ (ರಾಮಕಂಠೀ) | ಶೈವಾದ್ವೈತ |
| ೫. | ಯಾಮುನಾಚಾರ್ಯ | ೯ ನೇ | ತಮಿಳುನಾಡು | ಗೀತಾರ್ಥ-ಸಂಗ್ರಹ | ವಿಶಿಷ್ಟಾದ್ವೈತ |
| ೬. | ಅಭಿನವ ಗುಪ್ತ | ೧೦ ನೇ | ಕಾಶ್ಮೀರ | ಗೀತಾರ್ಥಸಂಗ್ರಹ | ಶೈವಾದ್ವೈತ |
| ೭. | ರಾಮಾನುಜಾಚಾರ್ಯ | ೧೧ ನೇ | ತಮಿಳುನಾಡು | ಗೀತಾಭಾಷ್ಯ | ವಿಶಿಷ್ಟಾದ್ವೈತ |
| ೮. | ಮಧ್ವಾಚಾರ್ಯ | ೧೩ ನೇ | ಕರ್ನಾಟಕ | ಗೀತಾ-ತಾತ್ಪರ್ಯ-ನಿರ್ಣಯ | ದ್ವೈತ |
| ೯. | ಅನುಭೂತಿ-ಸ್ವರೂಪಾಚಾರ್ಯ | ೧೩ ನೇ | | ಗೀತಾಭಾಷ್ಯ-ಟಿಪ್ಪಣ | ಅದ್ವೈತ |
| ೧೦. | ಆನಂದಗಿರಿ (ಆನಂದ-ಜ್ಞಾನ) | ೧೩ ನೇ | ಗುಜರಾತ್ | ಶ್ರೀಮದ್ಭಗವದ್ಗೀತಾ-ಶಾಂಕರ-ಭಾಷ್ಯ-ವ್ಯಾಖ್ಯಾನ (ಗೀತಾಭಾಷ್ಯವಿವೇಚನಮ್) | ಅದ್ವೈತ |
| ೧೧. | ಶಂಕರಾನಂದ | ೧೩ ನೇ | | (ಗೀತಾತಾತ್ಪರ್ಯಬೋಧಿನೀ) ಶಂಕರಾನಂದೀ | ಅದ್ವೈತ |
| ೧೨. | ಪದ್ಮನಾಭ ತೀರ್ಥ | ೧೩ ನೇ | ಕರ್ನಾಟಕ | ಪ್ರಕಾಶಿಕಾ (ಮಾಧ್ವ ಭಾಷ್ಯದ ವಿವರಣೆ) | ದ್ವೈತ |
| ೧೩. | ವೇದಾಂತದೇಶಿಕಾಚಾರ್ಯ (ವೆಂಕಟನಾಥ) | ೧೪ ನೇ | ತಮಿಳುನಾಡು (ಶ್ರೀರಂಗಂ) | ಗೀತಾರ್ಥ-ಸಂಗ್ರಹ-ರಕ್ಷಾ | ವಿಶಿಷ್ಟಾದ್ವೈತ |
| ೧೪. | ಜಯತೀರ್ಥ(ಟೀಕಾಚಾರ್ಯ) | ೧೪ ನೇ | ಕರ್ನಾಟಕ | ನ್ಯಾಯ-ದೀಪಿಕಾ (ಮಾಧ್ವ ಭಾಷ್ಯದ ವಿವರಣೆ) | ದ್ವೈತ |
| ೧೫. | ಸೂರ್ಯ ಪಂಡಿತ (ದೈವಜ್ಞ ಸೂರ್ಯ ಪಂಡಿತ) | ೧೪ ನೇ | ಪೂನಾ | ರಾಮ-ಕೃಷ್ಣ-ವಿಲೋಮ-ಕಾವ್ಯಮ್ | ಅದ್ವೈತ |
| ೧೬. | ಶ್ರೀಧರ ಸ್ವಾಮೀ (೯-೧೧ ಶತಮಾನಗಳ ನಡುವೆ ಎಂದು ಕೆಲವರ ಮತ) | ೧೪ ನೇ | ಒರಿಸ್ಸಾ | ಸುಬೋಧಿನೀ | ಅದ್ವೈತ(ಭಕ್ತಿಗೆ ಪ್ರಾಧಾನ್ಯ ನೀಡಿದ್ದಾರೆ.) |
| ೧೭. | ಸದಾನಂದ (ಸದಾನಂದ ಯೋಗೀಂದ್ರ ಸರಸ್ವತೀ) | ೧೫ ನೇ | | ಭಾವಪ್ರಕಾಶ | ಅದ್ವೈತ |
| ೧೮. | ವಲ್ಲಭಾಚಾರ್ಯ | ೧೬ ನೇ | ಗುಜರಾತ್ | ತತ್ತ್ವಾರ್ಥ-ದೀಪ-ನಿಬಂಧದಲ್ಲಿ ಶಾಸ್ತ್ರಾರ್ಥಪ್ರಕರಣ ಎಂಬ ಭಾಗದಲ್ಲಿನ ಗೀತಾ ವಿವರಣೆ | ಶುದ್ಧಾದ್ವೈತ |
| ೧೯. | ವಿಠ್ಠಲನಾಥ (ಗೋಸಾಯಿ ಜಿ) | ೧೬ ನೇ | ಗುಜರಾತ್ | ಗೀತಾತಾತ್ಪರ್ಯ | ಶುದ್ಧಾದ್ವೈತ |
| ೨೦. | ರಘೂತ್ತಮ ತೀರ್ಥ | ೧೬ ನೇ | ಕರ್ನಾಟಕ | ಪ್ರಮೇಯ-ದೀಪಿಕಾ-ಭಾವಬೋಧ | ದ್ವೈತ |

| ಕ್ರಮ | ವ್ಯಾಖ್ಯಾಕಾರರ ಹೆಸರು | ಕಾಲ | ದೇಶ | ವ್ಯಾಖ್ಯೆಯ ಹೆಸರು | ಸಂಪ್ರದಾಯ |
|---|---|---|---|---|---|
| ೨೧. | ಮಧುಸೂದನ ಸರಸ್ವತೀ | ೧೬ ನೇ | ಬಂಗಾಳ | ಗೂಢಾರ್ಥದೀಪಿಕಾ | ಅದ್ವೈತ |
| ೨೨. | ಧರ್ಮದತ್ತ ಶರ್ಮ (ಬಚ್ಚಾಶರ್ಮಾ) | | | ಗೂಢಾರ್ಥ-ತತ್ತ್ವಾಲೋಕ (ಗೂಢಾರ್ಥದೀಪಿಕೆಯ ವ್ಯಾಖ್ಯೆ) | ಅದ್ವೈತ |
| ೨೩. | ನೀಲಕಂಠ | ೧೬ ನೇ | ಕಾಶ್ಮೀರ | ಭಾವದೀಪಿಕಾ (ನೀಲಕಂಠೀ) | |
| ೨೪. | ಕೇಶವ ಭಟ್ಟ ಕಶ್ಮೀರಿನ್ | ೧೬ ನೇ | ಕಾಶ್ಮೀರ | ತತ್ತ್ವ-ಪ್ರಕಾಶಿಕಾ | ದ್ವೈತಾದ್ವೈತ |
| ೨೫. | ರಾಘವೇಂದ್ರತೀರ್ಥ (ಸುಧಾ ಪರಿಮಲಾಚಾರ್ಯ) | ೧೭ ನೇ | ಕರ್ನಾಟಕ | ಅರ್ಥಸಂಗ್ರಹ | ದ್ವೈತ |
| ೨೬. | ಪುರುಷೋತ್ತಮಾಚಾರ್ಯ | ೧೭ ನೇ | ಗುಜರಾತ್ | ಅಮೃತತರಂಗಿಣೀ | ಶುದ್ಧಾದ್ವೈತ |
| ೨೭. | ವಿಶ್ವನಾಥ ಚಕ್ರವರ್ತಿ ಠಾಕುರ್ | ೧೭ ನೇ | ಪಶ್ಚಿಮ ಬಂಗಾಳ | ಸಾರಾರ್ಥ-ವರ್ಷಿಣೀ | ಅಚಿಂತ್ಯ ಭೇದಾಭೇದ |
| ೨೮. | ನೀಲಕಂಠ ಚತುರ್ಧರ | ೧೭ ನೇ | ಮಹಾರಾಷ್ಟ್ರ | ಭಾರತಭಾವದೀಪಃ | ಅದ್ವೈತ |
| ೨೯. | ಸತ್ಯಪ್ರಜ್ಞ ತೀರ್ಥ | ೧೭ ನೇ | ಕರ್ನಾಟಕ | ನ್ಯಾಯ-ದೀಪಿಕಾ-ಭಾವಪ್ರಕಾಶಃ (ಜಯತೀರ್ಥರ ನ್ಯಾಯ-ದೀಪಿಕೆಯ ವ್ಯಾಖ್ಯೆ) | ದ್ವೈತ |
| ೩೦. | ಸತ್ಯನಾಥ ತೀರ್ಥ (ಸತ್ಯನಾಥ ಯತಿ) | ೧೭ ನೇ | ಕರ್ನಾಟಕ | ವಾಕ್ಯವಿವೇಕ (ಜಯತೀರ್ಥರ ನ್ಯಾಯ-ದೀಪಿಕೆಯ ವ್ಯಾಖ್ಯೆ) | ದ್ವೈತ |
| ೩೧. | ವನಮಾಲೀ ಮಿಶ್ರ | ೧೭ ನೇ | | ಗೀತಾಗೂಢಾರ್ಥ-ಚಂದ್ರಿಕಾ | ದ್ವೈತ |
| ೩೨. | ಗಿರಿಧಾರಿ ದಾಸ | ೧೭ ನೇ | | ಕುಸುಮ ವೈಜಯಂತೀ | |
| ೩೩. | ರಾಜಾನಕ ಲಕ್ಷ್ಮೀ ರಾಮ | ೧೭ ನೇ | ಕಾಶ್ಮೀರ | ಲಾಸ್ಕೀ ಟೀಕಾ | ಶೈವಾದ್ವೈತ |
| ೩೪. | ತಾಮ್ರಪರ್ಣಿ ಶ್ರೀನಿವಾಸಾಚಾರ್ಯ | ೧೮ ನೇ | ಕರ್ನಾಟಕ | ಕಿರಣಾವಲೀ(ಜಯತೀರ್ಥರ ನ್ಯಾಯ-ದೀಪಿಕೆಯ ವ್ಯಾಖ್ಯೆ) | ದ್ವೈತ |
| ೩೫. | ಬಲದೇವ ವಿದ್ಯಾಭೂಷಣ | ೧೮ನೇ | ಒರಿಸ್ಸಾ | ಗೀತಾಭೂಷಣ | ಅಚಿಂತ್ಯ ಭೇದಾಭೇದ |
| ೩೬. | ಬೆಲ್ಲಂಕೊಂಡ ರಾಮರಾಯ ಕವಿ | ೧೯ ನೇ | ಆಂಧ್ರ ಪ್ರದೇಶ | ಭಾಷ್ಯಾರ್ಕ-ಪ್ರಕಾಶ | ಅದ್ವೈತ |
| ೩೭. | ಸಚ್ಚಿದಾನಂದೇಂದ್ರ ಸರಸ್ವತೀ | ೨೦ ನೇ | ಕರ್ನಾಟಕ | ಗೀತಾಶಾಸ್ತ್ರಾರ್ಥ-ವಿವೇಕಃ | ಶುದ್ಧಶಾಂಕರ ಪ್ರಕ್ರಿಯಾ |
| ೩೮. | ಜಗದೀಶ್ವರ ವೇದಪಾಠಿ | ೧೯ ನೇ | ಕಾಶ್ಮೀರ | ರಣವೀರ ಸಂಬೋಧಿನೀ | ಶೈವಾದ್ವೈತ |
| ೩೯. | ಹರಿದಾಸ ಸಿದ್ಧಾಂತ ವಾಗೀಶ | ೨೦ ನೇ | ಬಂಗಾಳ | ಭಾರತ-ಕೌಮುದೀ | |
| ೪೦. | ಸ್ವಾಮಿ ವಾಸುದೇವಾನಂದ | ೨೦ ನೇ | ಬಂಗಾಳ | ಭಾಷಾವಿವೃತಿ (ಶ್ರೀಶಾಂಕರಗೀತಾಭಾಷ್ಯ ವನ್ನು ಆಧರಿಸಿದೆ) | ರಾಮಕೃಷ್ಣ-ವಿವೇಕಾನಂದ ದರ್ಶನ |
| ೪೧ | ಭದ್ರೇಶದಾಸ ಸ್ವಾಮಿ | ೨೦ ನೇ | ಗುಜರಾತ್ | ಸ್ವಾಮಿ-ನಾರಾಯಣ-ಭಾಷ್ಯ | ಅಕ್ಷರ ಪುರುಷೋತ್ತಮ ದರ್ಶನ |

ಈ ಮೇಲೆ ಕೋಷ್ಟಕದಲ್ಲಿ ನಮೂನೆಗಾಗಿ ಕೆಲವನ್ನು ಮಾತ್ರ ಉಲ್ಲೇಖಿಸಲಾಗಿದೆ. ಇವಲ್ಲದೆ, ರಾಮಚಂದ್ರ ಸರಸ್ವತಿಯ ಗೀತಾ-ತಾತ್ಪರ್ಯ-ಶುದ್ಧಿ, ಧನಪತಿಯ ಭಾಷ್ಯೋತ್ಕರ್ಷ-ದೀಪಿಕಾ, ವಸುಗುಪ್ತನ ವ್ಯಾಖ್ಯೆ, ಪಂಚೋಲಿಯ ವ್ಯಾಖ್ಯಾನ ಮುಂತಾದ ಇನ್ನೂ ಹತ್ತಾರು ಸಂಸ್ಕೃತ ವ್ಯಾಖ್ಯೆಗಳಿವೆ. ಹನ್ನೊಂದನೇ ಶತಮಾನದ ಕಾಶ್ಮೀರಿ ಪಂಡಿತ ದೇವಬೋಧ, ೧೬ನೇ ಶತಮಾನದ ಬಂಗಾಳದ ಅರ್ಜುನ ಮಿಶ್ರ ಮುಂತಾದವರು ಮಹಾಭಾರತಕ್ಕೆ ವ್ಯಾಖ್ಯಾನ ಬರೆದಿದ್ದಾರೆ, ಪ್ರಾಸಂಗಿಕವಾಗಿ ಗೀತೆಯನ್ನು ವಿವರಿಸಿದ್ದಾರೆ.

ಸಂಸ್ಕೃತೇತರ ವ್ಯಾಖ್ಯಾನಗಳಿಗಂತೂ ಲೆಕ್ಕವೇ ಇಲ್ಲ ಎಂದೇ ಹೇಳಬೇಕಾಗುತ್ತದೆ. ಅವುಗಳಲ್ಲಿ ಭಾರತೀಯ ಭಾಷೆಗಳಲ್ಲೇ ಸಾವಿರಾರು ಪುಸ್ತಕಗಳಿವೆ. ಅವನ್ನುಳಿದು ಹೊರ ರಾಷ್ಟ್ರದವರೂ ತಂತಮ್ಮ ಭಾಷೆಗೆ ಗೀತೆಯನ್ನು ತಂದುಕೊಂಡು ತಮ್ಮದೇ ಆದ ರೀತಿಯಿಂದ ಅದರ ಅರ್ಥ ಚಿಂತನೆ ಮಾಡುತ್ತ ಮುಂದುವರಿದಿದ್ದಾರೆ.

## ಸಂಸ್ಕೃತೇತರ ಗೀತಾ ವ್ಯಾಖ್ಯೆಗಳು

| ಕ್ರಮ | ವ್ಯಾಖ್ಯಾಕಾರರ ಹೆಸರು | ಕಾಲ | ದೇಶ | ವ್ಯಾಖ್ಯೆಯ ಹೆಸರು | ಭಾಷೆ |
|---|---|---|---|---|---|
| ೧. | ಹನುಮಾನ್ | ಅರ್ಜುನನ ರಥದ ಬಾವುಟದಲ್ಲಿದ್ದ ಹನುಮಂತ ಮೈತಳೆದು ಬರೆದದ್ದು ಎನ್ನುತ್ತದೆ ಐತಿಹ್ಯ | | ಪೈಶಾಚ ಭಾಷ್ಯ | ಸಂಸ್ಕೃತದ ಅಪಭ್ರಂಶ ಪೈಶಾಚ ಭಾಷೆ |
| ೨. | ಜ್ಞಾನೇಶ್ವರ | ೧೩ನೇ | ಮಹಾರಾಷ್ಟ್ರ | ಜ್ಞಾನೇಶ್ವರೀ | ಮರಾಠಿ |
| ೩. | ಏಕನಾಥ | ೧೬ ನೇ | ಮಹಾರಾಷ್ಟ್ರ | ಗೀತಾ ಸಾರ್ | ಮರಾಠಿ |
| ೪. | ಸ್ವಾಮಿ ವಿವೇಕಾನಂದ | ೧೯ ನೇ | ಪಶ್ಚಿಮ ಬಂಗಾಳ | Thoughts on the Gita (ಭಾಷಣಗಳ ಲಿಖಿತ ರೂಪವೂ ಗಣನೀಯ) | ಆಂಗ್ಲ |
| ೫. | ಬಾಲ ಗಂಗಾಧರ ತಿಲಕ | ೧೯ ನೇ | ಮಹಾರಾಷ್ಟ್ರ | ಶ್ರೀಮದ್ಭಗವದ್ಗೀತಾ ರಹಸ್ಯ | ಮರಾಠಿ |
| ೬. | ಭಕ್ತಿವಿನೋದ ಠಾಕುರ್ | ೧೯ ನೇ | ಪಶ್ಚಿಮ ಬಂಗಾಳ | ವಿದ್ವದ್ ರಂಜನ | ಬಂಗಾಳಿ |
| ೭. | ಮಹಾತ್ಮಾ ಗಾಂಧಿ | ೨೦ ನೇ | ಗುಜರಾತ್ | ಅನಾಸಕ್ತಿ ಯೋಗ | ಗುಜರಾತಿ |
| ೮. | ವಿನೋಬಾ ಭಾವೆ | ೨೦ ನೇ | ಮಹಾರಾಷ್ಟ್ರ | ಗೀತಾಇ (ಗೀತಾ ಪ್ರವಚನ) | ಮರಾಠಿ |
| ೯. | ಪರಮಹಂಸ ಯೋಗಾನಂದ | ೨೦ ನೇ | ಉತ್ತರ ಪ್ರದೇಶ | God Talks with Arjuna: The Bhagavad Gita | ಆಂಗ್ಲಾನುವಾದ ಮತ್ತು ವ್ಯಾಖ್ಯೆ |
| ೧೦. | ಶ್ರೀಅರವಿಂದ | ೨೦ ನೇ | ಪಶ್ಚಿಮ ಬಂಗಾಳ | Essays on The Gita | ಆಂಗ್ಲ |
| ೧೧. | ಸಚ್ಚಿದಾನಂದೇಂದ್ರ ಸರಸ್ವತೀ | ೨೦ ನೇ | ಕರ್ನಾಟಕ | ಶ್ರೀಮದ್ಭಗವದ್ಗೀತೆಯ ಸಾರ ಮತ್ತು ಭಗವದ್ಗೀತೆಯ ಪ್ರಧಾನೋಪದೇಶಗಳು | ಕನ್ನಡ |
| ೧೨. | ಸರ್ವೇಪಲ್ಲಿ ರಾಧಾಕೃಷ್ಣ | ೨೦ ನೇ | ತಮಿಳುನಾಡು | The Bhagavadgita (with an introductory essay and notes) | ಆಂಗ್ಲ |
| ೧೩ | ಸ್ವಾಮಿ ಚಿದ್ಭವಾನಂದ | ೨೦ ನೇ | ತಮಿಳುನಾಡು | The Bhagavad Gita | ಆಂಗ್ಲ |
| ೧೪. | ಸ್ವಾಮಿ ಚಿನ್ಮಯಾನಂದ | ೨೦ ನೇ | ಕೇರಳ | The Holy Geeta | ಆಂಗ್ಲ |
| ೧೫. | ಶ್ರೀಲ ಪ್ರಭುಪಾದ | ೨೦ ನೇ | ಪಶ್ಚಿಮ ಬಂಗಾಳ | Bhagavad-Gita As It Is | ಆಂಗ್ಲ |

| ಸಂಸ್ಕೃತೇತರ ಗೀತಾ ವ್ಯಾಖ್ಯೆಗಳು | | | | | |
|---|---|---|---|---|---|
| ಕ್ರಮ | ವ್ಯಾಖ್ಯಾಕಾರರ ಹೆಸರು | ಕಾಲ | ದೇಶ | ವ್ಯಾಖ್ಯೆಯ ಹೆಸರು | ಭಾಷೆ |
| ೧೬. | ಸ್ವಾಮಿ ರಂಗನಾಥಾನಂದ | ೨೦ ನೇ | ಕೇರಳ | The Universal Message of Bhagavadgita | ಆಂಗ್ಲ |
| ೧೭. | ಡಿ.ವಿ.ಗುಂಡಪ್ಪ | ೨೦ ನೇ | ಕರ್ನಾಟಕ | ಶ್ರೀಮದ್ಭಗವದೀತಾ ತಾತ್ಪರ್ಯ ಅಥವಾ ಜೀವನಧರ್ಮಯೋಗ | ಕನ್ನಡ |
| ೧೮. | ಸ್ವಾಮಿ ಸೋಮನಾಥಾನಂದ | ೨೦ ನೇ | ಕರ್ನಾಟಕ | ಗೀತಾಭಾವಧಾರೆ | ಕನ್ನಡ |
| ೧೯. | ಸ್ವಾಮಿ ರಾಮಸುಖದಾಸ | ೨೦ ನೇ | ರಾಜಸ್ಥಾನ | ಸಾಧಕ ಸಂಜೀವಿನೀ | ಹಿಂದೀ |
| ೨೦. | ಭೂತನಾಥ ಸಪ್ತತೀರ್ಥ | ೨೦ ನೇ | ಪಶ್ಚಿಮ ಬಂಗಾಳ | ಶ್ರೀಮದ್ಭಗವದ್ಗೀತಾ ಓ ಶ್ರೀಮನ್ ಮಧುಸೂದನ ಸರಸ್ವತೀಕೃತ ಟೀಕಾ | ಬಂಗಾಳಿ |

### ೯. ಶ್ರೀಶಂಕರರ ಗೀತಾಭಾಷ್ಯ

ಈಗ ಉಪಲಭ್ಯವಿರುವ ವ್ಯಾಖ್ಯೆಗಳಲ್ಲಿ ಶ್ರೀಶಂಕರಾಚಾರ್ಯರ ಶ್ರೀಮದ್ಭಗವದ್ಗೀತಾಭಾಷ್ಯವೇ ಅತ್ಯಂತ ಪ್ರಾಚೀನವಾದದ್ದು. ಹಲ ವಾರು ದೃಷ್ಟಿಗಳಿಂದ ಅವರ ಕೃತಿ ಮಹತ್ವಪೂರ್ಣವಾಗಿದೆ. ಗೀತಾ ಭಾಷ್ಯದಲ್ಲಿ ಅದ್ವೈತ ಸಿದ್ಧಾಂತ ಪ್ರತಿಪಾದನೆ ಮಾಡಿದ್ದಲ್ಲದೆ ಸಣ್ಣ ಪುಟ್ಟ ಅಮೂಲ್ಯ ವಿಚಾರಗಳತ್ತ ಆಚಾರ್ಯರು ಗಮನ ಸೆಳೆಯು ತ್ತಾರೆ. ಅಲ್ಲದೆ, ಮಹಾಭಾರತಾದಿ ಶಾಸ್ತ್ರಗಳಿಂದ ಅವರು ಉದಾ ಹರಿಸುವ ವಾಕ್ಯಗಳೂ ಸಂಗ್ರಹಯೋಗ್ಯ. ಮನುಷ್ಯನ ಯುಕ್ತಿಗೆ, ವಿಚಾರಶಕ್ತಿಗೆ ಸರಿಯೆಂದು ತೋರುವಂಥ ವಿವರಣೆ ಆಚಾರ್ಯ ರದ್ದು. ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಅನುಕೂಲ ವಾಗುವ ಸಲಹೆ ಸೂಚನೆಗಳಿಂದ ತುಂಬಿದ ಬರಹ ಅವರದ್ದು. ಎರಡನೇ ಅಧ್ಯಾಯದ ಸ್ಥಿತಪ್ರಜ್ಞ ಲಕ್ಷಣಗಳನ್ನು ವಿವರಿಸುವಾಗ ಹೇಳುವ ಮಾತು ಆಪ್ಯಾಯಮಾನವಾಗಿದೆ: **ಸರ್ವತ್ರೈವ ಹಿ ಅಧ್ಯಾತ್ಮಶಾಸ್ತ್ರೇ ಕೃತಾರ್ಥಲಕ್ಷಣಾನಿ ಯಾನಿ ತಾನ್ಯೇವ ಸಾಧನಾ ನ್ಯುಪದಿಶ್ಯಂತೇ ಯತ್ನಸಾಧ್ಯತ್ವಾತ್** – ಸಾಮಾನ್ಯವಾಗಿ, ಆಧ್ಯಾ ತ್ಮಿಕ ಗ್ರಂಥಗಳಲ್ಲಿ ಗುರಿ ಸೇರಿದವರ ಲಕ್ಷಣಗಳೇನಿವೆಯೋ ಅವನ್ನೇ ಸಾಧನೆಗಳೆಂದು ಆಣೆಕೊಡಿಸುವರು, ಏಕೆಂದರೆ ಅವು ಅಳವಡಿಸಿ ಕೊಳ್ಳಬಹುದಾದವು *(ಗೀತಾ. ಭಾ-೧, ಪು.೧೨೧).* ಹದಿ ನೆಂಟನೇ ಅಧ್ಯಾಯದ ವಿವರಣೆಯಲ್ಲಿ, ಭಗವಂತನಲ್ಲಿ ಶರಣಾಗ ಬೇಕೆಂಬುದೇ ಎಲ್ಲ ವೇದಾಂತಗಳ ಸಾರಭೂತವಾದ ಮಾತು ಗಳಿಂದ ತಿಳಿದುಬರುತ್ತದೆ – **ಸರ್ವವೇದಾಂತಸಾರವಿಹಿತಂ** *(ಗೀತಾ. ಭಾ-೨, ಪು.೯೫೧)* ಎಂದಿದ್ದಾರೆ. ಗೀತಾಭಾಷ್ಯದಲ್ಲಿ ಬರುವ ಭಗವತ್ಪಾದರ ಎಷ್ಟೋ ನುಡಿಗಳು ಸೂಕ್ತಿಗಳಂತಿವೆ. ಉದಾಹರಣೆಗೆ – **ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ ॥** *(ಗೀತಾ. ಭಾ-೨, ಪು. ೬೨೧)* – 'ಸಂಪ್ರದಾಯವನ್ನು ತಿಳಿಯದವನು ಎಲ್ಲ ಶಾಸ್ತ್ರ ಓದಿ ದ್ದರೂ, ಅವನನ್ನು ಮೂರ್ಖನಂತೆಯೇ ಕಡೆಗಣಿಸಬೇಕು', ಎನ್ನು ತ್ತಾರೆ ಆಚಾರ್ಯರು. ಹದಿನೈದನೇ ಅಧ್ಯಾಯದಲ್ಲಿ ಇಡೀ ಗೀತೆ ಯನ್ನು ಅಡಕಗೊಳಿಸಿ ಹೇಳಲಾಗಿದೆ ಎನ್ನುತ್ತಾರೆ – **ಸರ್ವೋ ಹಿ ಗೀತಾಶಾಸ್ತ್ರಾರ್ಥ ಅಸ್ಮಿನ್ನಧ್ಯಾಯೇ ಸಮಾಸೇನ ಉಕ್ತಃ** *(ಗೀತಾ. ಭಾ-೨, ಪು. ೮೦೪).* ಮತ್ತೊಂದು ಉದಾಹರಣೆ – (ಎಲ್ಲ ಕರ್ಮದ ಹಂಗನ್ನೂ ತೊರೆದ ಸಂನ್ಯಾಸಿಗಳಿಗೆ ಯಾವ ಕರ್ಮವೂ ಅಂಟುವುದಿಲ್ಲ,) ಇದೇ ಎಲ್ಲ ವೇದಗಳ ಸಾರ ಎಂದು ಚುರುಕು ಬುದ್ಧಿಯ ಪ್ರಾಜ್ಞರು ತಿಳಿಯಬೇಕು' – **'ಸ ಏಷಃ ಸರ್ವ ವೇದಾರ್ಥಸಾರಃ ನಿಪುಣಮತಿಭಿಃ ಪಂಡಿತೈಃ ವಿಚಾರ್ಯ ಪ್ರತಿ ಪತ್ತವ್ಯಃ'** *(ಗೀತಾ. ಭಾ-೨, ಪು.೮೭೩-೮೭೪)* ಎನ್ನುತ್ತಾರೆ ಹದಿನೆಂಟನೇ ಅಧ್ಯಾಯದಲ್ಲಿ. ಗೀತಾಭಾಷ್ಯದಲ್ಲಿ ಅಧ್ಯಾತ್ಮ ಜ್ಞಾನದ ಹೊಳೆ ಮೊದಲಿನಿಂದ ಕೊನೆಯವರೆಗೆ ತಡೆಯಿಲ್ಲದೆ ಹರಿದು ಓದುಗರನ್ನು ಹಸನಾಗಿಸುತ್ತದೆ.

### ೧೦. ಜ್ಞಾನದೇವರ ಜ್ಞಾನೇಶ್ವರೀ

ಸಂತ ಜ್ಞಾನೇಶ್ವರರಿಂದ ರಚಿತವಾದ ಗೀತಾ ವ್ಯಾಖ್ಯೆ ಜ್ಞಾನೇ ಶ್ವರೀ. ಇದು ಸ್ವತಂತ್ರ ಗ್ರಂಥವೋ ಎಂಬಷ್ಟು ಸ್ವಂತಿಕೆಯಿಂದ ಕೂಡಿದೆ. ಅದರ ಮತ್ತೊಂದು ಹೆಸರು **'ಭಾವಾರ್ಥದೀಪಿಕಾ.'** ಮರಾಠಿ ಪದ್ಯಮಯವಾದ ಈ ಕೃತಿಯಲ್ಲಿ ೯೦೦೦ ಚತುಷ್ಪದಿ ಗಳಿವೆ. ಅವುಗಳನ್ನು ಓವಿ ಎನ್ನುತ್ತಾರೆ. ತತ್ತ್ವಗಳನ್ನು ರಸವತ್ತಾಗಿ ವರ್ಣಿಸಲಾಗಿದೆ ಅಲ್ಲಿ. ಉದಾಹರಣೆಗೆ ಹದಿಮೂರನೇ ಅಧ್ಯಾ ಯದ **ಇಂದ್ರಿಯಾರ್ಥೇಷು ವೈರಾಗ್ಯಂ...** ಎಂಬ ಎಂಟನೇ ಶ್ಲೋಕದ ೧೪,೧೫,೧೬ ಓವಿಗಳನ್ನು ನೋಡಬಹುದು. ವೈರಾಗ್ಯ ವುಳ್ಳವರಿಗೆ ವಿಷಯ ವಸ್ತುಗಳು ಹೇಗೆ ರುಚಿಸುವುದಿಲ್ಲ ಎಂಬು ದನ್ನು ಮನದಟ್ಟಾಗುವಂತೆ ಬಣ್ಣಿಸಲಾಗಿದೆ.

### ೧೧. ಶ್ರೀಮದ್ರಾಮಾನುಜಾಚಾರ್ಯರ ಗೀತಾಭಾಷ್ಯ

ಶ್ರೀರಾಮಾನುಜಾಚಾರ್ಯರದ್ದು ವಿಶಿಷ್ಟಾದ್ವೈತ ಸಿದ್ಧಾಂತ. ಜೀವ ಮತ್ತು ಜಗತ್ತು ಬ್ರಹ್ಮದ ಅಂಶ, ಈ ಎರಡು ಅಂಶಗಳಿಂದ ಕೂಡಿದ್ದು ಬ್ರಹ್ಮ. ಜೀವ ಜಗತ್ತು ಬ್ರಹ್ಮದಿಂದ ಅಭಿನ್ನವಾದರೂ ಪರಸ್ಪರ ಭಿನ್ನ ಎಂಬುದು ವಿಶಿಷ್ಟಾದ್ವೈತದ ನಿಲುವು. ಈ ತತ್ತ್ವ

ವನ್ನು ಪ್ರತಿಪಾದಿಸಿದ್ದಲ್ಲದೇ ರಾಮಾನುಜರು ಗೀತಾಭಾಷ್ಯದಲ್ಲಿ ಪೂಜಾದಿ ನಿತ್ಯಸೇವೆಗೆ, ಭಕ್ತಿಗೆ ಒತ್ತುಕೊಟ್ಟು ಬರೆದಿದ್ದಾರೆ. ಅವರ ವಿವರಣೆಗಳು ಸಾಮಾನ್ಯ ಜನರಿಗೂ ಎಟುಕುವಂಥವು. ಅದ್ವೈತ ಪರವಾದ ಶ್ರೀಶಂಕರರ ಭಾಷ್ಯವು ತತ್ತ್ವಪ್ರಧಾನವಾದ್ದರಿಂದ ಸಾಮಾನ್ಯರಿಗೆ ಕಠಿಣವೆನಿಸಬಹುದು. ವಸ್ತುತಃ ಶ್ರೀಶಂಕರರ ನುಡಿಗಳೂ ಪ್ರಾಯೋಗಿಕವಾದುವೇ, ಆದರೆ ಅಭಿರುಚಿ ಭೇದ ಎಂಬುದು ಅಲ್ಲಗಳೆಯಲಾಗದ ಸತ್ಯ. ಅದ್ವೈತದ ಮಾತುಗಳು ಮನಸ್ಸಿಗೆ ನಾಟದಿದ್ದರೆ ಶ್ರೀರಾಮಾನುಜರ ಕೈಂಕರ್ಯದ ಆದರ್ಶವನ್ನು ಅವಲಂಬಿಸಿ ಮುಂದುವರಿಯಬಹುದು. ಅವರು ಕೆಲವೊಮ್ಮೆ ಆಚರಣೆಯ ವಿವರಗಳಿಗೆ ಗುರುತ್ವ ಕೊಟ್ಟು ಬರೆದಿರುವುದು ಸಾಧಕರಿಗೆ ಉತ್ತಮ ಮಾರ್ಗದರ್ಶನವಾಗಿದೆ. ಉದಾಹರಣೆಗೆ, ಒಂಬತ್ತನೇ ಅಧ್ಯಾಯದಲ್ಲಿ **ನಮಸ್ಯಂತಶ್ಚ ಮಾಂ ಭಕ್ತ್ಯಾ** ಎಂಬುದನ್ನು ವಿವರಿಸುವಾಗ ಸಾಷ್ಟಾಂಗ ನಮಸ್ಕಾರವನ್ನು ಹೇಗೆ ಮಾಡಬೇಕೆಂದು ಬಿಡಿಸಿ ಹೇಳಿರುವುದು ತುಂಬ ಮಾರ್ಮಿಕವಾಗಿದೆ: ''**ಭಕ್ತಿ- ಭಾರಾವನಮಿತ-ಮನೋಬುದ್ಧ್ಯಭಿಮಾನ-ಪದದ್ವಯ-ಕರದ್ವಯ-ಶಿರೋಭಿಃ ಅಷ್ಟಾಂಗೈಃ ಅಚಿಂತಿತ-ಪಾಂಸು-ಕರ್ದಮ-ಶರ್ಕರಾದಿಕೇ ಧರಾತಲೇ ದಂಡವತ್ ಪ್ರಣಿಪತಂತಃ** – (ಅಡ್ಡ ಬೀಳುವ ನೆಲದಲ್ಲಿ) ಧೂಳು, ಕೆಸರು, ಸಕ್ಕರೆ ಇತ್ಯಾದಿ ಇವೆಯಲ್ಲಾಽಽ.. ಎಂದೆಲ್ಲ ತಲೆಬಿಸಿ ಮಾಡಿಕೊಳ್ಳದೆ, ಭಕ್ತಿಯ ಭಾರದಿಂದ ಬಾಗಿದ ಮನಸ್ಸು, ಬುದ್ಧಿ, ಅಭಿಮಾನ, ಎರಡು ಪಾದ, ಎರಡು ಕೈ, ಹಾಗೂ ತಲೆ ಎಂಬ ಎಂಟು ಅಂಗಗಳಿಂದ ನೆಲದ ಮೇಲೆ ದಂಡವತ್ ಅಡ್ಡಬೀಳಬೇಕು *(ಆದಿದೇವಾನಂದ. ಪು.೨೦೪)* '' ಎನ್ನುತ್ತಾರೆ.

## ೧೨. ಶ್ರೀಮನ್ಮಧ್ವಾಚಾರ್ಯರ ಗೀತಾ ತಾತ್ಪರ್ಯನಿರ್ಣಯ

ಶ್ರೀಮನ್ಮಧ್ವಾಚಾರ್ಯರು ದ್ವೈತ ವೇದಾಂತವನ್ನು ಪ್ರತಿಪಾದಿಸಿದರು. ಅದ್ವೈತವು ನಿರ್ಗುಣ ಬ್ರಹ್ಮವನ್ನು ಬೋಧಿಸಿದರೆ, ದ್ವೈತವು ಪೂರ್ಣ ಬ್ರಹ್ಮವನ್ನು ಸಾರುತ್ತದೆ. ಆತ್ಮ ಬ್ರಹ್ಮೈಕ್ಯವು ಸಕಲವೇದವೇದಾಂತಗಳ ಸಾರ ಎಂಬುದು ಶ್ರೀಶಂಕರರ ನಿಲುವಾದರೆ, ಬಿಂಬ ಪ್ರತಿಬಿಂಬದಂತೆ ಬ್ರಹ್ಮ ಮತ್ತು ಆತ್ಮ ಎಂಬುದು ಮಧ್ವರ ಮತ. ಅದ್ವೈತ ಸಿದ್ಧಾಂತದಲ್ಲಿ ಸತ್ಯಕ್ಕೆ ಮೂರು ಮುಖಗಳು – ಆತ್ಯಂತಿಕ, ಪ್ರಾತಿಭಾಸಿಕ, ವ್ಯಾವಹಾರಿಕ. ಜಗತ್ತು ವ್ಯಾವಹಾರಿಕ ಸತ್ಯ. ದ್ವೈತ ಸಿದ್ಧಾಂತದಲ್ಲಿ ಜಗತ್ತೂ ಪಾರಮಾರ್ಥಿಕ ಸತ್ಯ. ಎರಡನೇ ಅಧ್ಯಾಯದ **ಅಂತವಂತ ಇಮೇ ದೇಹಾ...** ಎಂಬ ೧೮ನೇ ಶ್ಲೋಕದ ತಾತ್ಪರ್ಯನಿರ್ಣಯದಲ್ಲಿ ಮುಕ್ತಜೀವರಿಗೂ ಸ್ವರೂಪ ದೇಹವಿರುತ್ತದೆ ಎನ್ನತ್ತಾರೆ ಮಧ್ವರು – **ಇಮೇ ದೇಹಾ ಇತಿ ವಿಶೇಷಣಾತ್ ನಿತ್ಯಃ ಚಿದಾನಂದಾತ್ಮಕಃ ಸ್ವರೂಪಭೂತೋ ದೇಹೋ ಮುಕ್ತಾನಾಮ್ ಅಪಿ ವಿದ್ಯತೇ ಇತಿ ಜ್ಞಾಯತೇ** – 'ಈ ದೇಹಗಳು' ಎಂಬ ವಿಶೇಷಣವನ್ನು (ಶ್ಲೋಕದಲ್ಲಿ) ಬಳಸಿದ್ದರಿಂದ ನಿತ್ಯವೂ, ಚಿದಾನಂದ ರೂಪವೂ, ತನ್ನ ನೈಜರೂಪವೂ ಆದ ಒಡಲು ಮುಕ್ತರಾದವರಿಗೂ ಇರುತ್ತದೆ ಎಂದು. *(ಪಾಂಡುರಂಗಿ. ಭಾ-೧, ಪು.೧೦೩).* ಅವರು ಭಕ್ತಿ ಉಪಾಸನೆಗಳಿಗೆ ಒತ್ತುಕೊಟ್ಟಿದ್ದಾರೆ.

## ೧೩. ವ್ಯಾಖ್ಯಾನದಲ್ಲಿನ ಸ್ವಾರಸ್ಯಗಳ ಇಣುಕು ನೋಟ

ಪ್ರತಿಯೊಬ್ಬ ಆಚಾರ್ಯರ ವ್ಯಾಖ್ಯೆಯೂ ಅಪೂರ್ವವಾದದ್ದು. ಅವರೆಲ್ಲರೂ ತಂತಮ್ಮದೇ ಆದ ರೀತಿಯಲ್ಲಿ ಪ್ರತಿಭೆಯನ್ನೂ ಮಹಿಮೆಯನ್ನೂ ಮೆರೆದಿದ್ದಾರೆ. ಜ್ಞಾನಿಗಳಾದ ಆ ಆಚಾರ್ಯರ ಕೃತಿಗಳನ್ನು ಓದಿದಷ್ಟೂ ಅರ್ಥ ತೆರೆದುಕೊಳ್ಳುತ್ತದೆ, ತಲೆ ಸರಿ ಹೋಗುತ್ತದೆ. ಇಲ್ಲಿ ಕೇವಲ ನಮೂನೆಗಾಗಿ ಒಂದೆರಡು ಶ್ಲೋಕಗಳನ್ನು ಆಚಾರ್ಯರು ಬಗೆಬಗೆಯಾಗಿ ವಿವರಿಸುವುದನ್ನು ತೋರಿಸಲಾಗಿದೆ.

**ಯಾವಾನರ್ಥ ಉದಪಾನೇ...** ಎರಡನೇ ಅಧ್ಯಾಯದ ೪೬ನೇ ಶ್ಲೋಕದಲ್ಲಿ **ಬ್ರಾಹ್ಮಣಸ್ಯ** ಎಂಬ ಶಬ್ದದ ಅರ್ಥವನ್ನು ಶಂಕರರು ಸಂನ್ಯಾಸಿ ಎಂದು – **ಬ್ರಾಹ್ಮಣಸ್ಯ ಸಂನ್ಯಾಸಿನಃ** *(ಗೀತಾ. ಭಾ-೧, ಪು.೧೧೯)* ಎಂದು ವಿವರಿಸುತ್ತಾರೆ. ಶ್ರೀಧರರು ಬ್ರಹ್ಮದಲ್ಲಿ ನೆಲೆನಿಂತವನ – ಬ್ರಹ್ಮನಿಷ್ಠಸ್ಯ *(ಪಣಸೀಕರ. ಪು.೧೦೬)* ಎಂದಿದ್ದಾರೆ. ಶ್ರೀರಾಮಾನುಜಾಚಾರ್ಯರು, ವೇದೋಕ್ತ ಧರ್ಮಪಾಲನೆ ಮಾಡುವ ಮುಮುಕ್ಷುವಿನ (ಸಾಧಕನ) ಎಂದಿದ್ದಾರೆ – **ವೈದಿಕಸ್ಯ ಮುಮುಕ್ಷೋಃ** *(ಆದಿದೇವಾನಂದ.ಪು.೯೬).* ಮಧುಸೂದನ ಸರಸ್ವತಿಗಳು ಬ್ರಹ್ಮವಾಗಲು ಬಯಸುವವನ – ಬ್ರಹ್ಮ ಬುಭೂಷೋಃ *(ಪಣಸೀಕರ. ಪು.೧೦೬)* ಎಂದು ಹೇಳಿದ್ದಾರೆ.

**ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ...** ಇತ್ಯಾದಿಯು ಹದಿನೈದನೇ ಅಧ್ಯಾಯದ ೧೩ನೇ ಶ್ಲೋಕ. ಅದನ್ನು ಭಾರತಭಾವದೀಪಕಾರ ನೀಲಕಂಠ ಚತುರ್ಧರರು ಹೀಗೆ ವಿವರಿಸುತ್ತಾರೆ – ಜಲಮಯೋ ಭೂತ್ವಾ ಸರ್ವಾ ಓಷಧೀಃ ಪುಷ್ಣಾಮಿ ಚ ರಸವತೀಃ, ಪುಷ್ಟಾಶ್ಚ ಕರೋಮಿ. ಸೋಮೋ ಹಿ ಸ್ವಾತ್ಮ-ರಸಾನುಪ್ರವೇಶೇನ ಸರ್ವಾ ಓಷಧೀಃ ಪುಷ್ಣಾತೀತಿ ಪ್ರಸಿದ್ಧಮ್ *(ಭಟ್ಟಾಚಾರ್ಯ, ಭಾ-೧೮, ಪು.೫೭೦)* – 'ನೀರುಮಯವಾದ ಚಂದ್ರನಾಗಿ ಎಲ್ಲ ಸಸ್ಯಗಳನ್ನು, ಪೈರುಗಳನ್ನು ಪೋಷಿಸುತ್ತೇನೆ ರಸಗೂಡುವಂತೆ ಮಾಡುತ್ತೇನೆ. ಚಂದ್ರನು ತನ್ನ ರಸವನ್ನು ಒಳಹೊಗಿಸಿ ಸಸ್ಯರಾಶಿಗೆ ಬಲ ನೀಡುತ್ತಾನೆ ಎಂದೇ ಪ್ರಸಿದ್ಧಿಯಲ್ಲವೇ' ಎಂದು. ಮಹಾಮಹೋಪಾಧ್ಯಾಯ ಹರಿದಾಸ ಸಿದ್ಧಾಂತ ವಾಗೀಶ ಭಟ್ಟಾಚಾರ್ಯರು ತಮ್ಮ 'ಭಾರತ ಕೌಮುದೀ' ವ್ಯಾಖ್ಯೆಯಲ್ಲಿ, 'ರಸಾತ್ಮಕೋ ಜಲರೂಪಃ ಸೋಮಃ ಚಂದ್ರೋ ಭೂತ್ವಾ ಸರ್ವಾಃ ಓಷಧೀಃ ವ್ರೀಹಯವಾದ್ಯಾಃ ಪುಷ್ಣಾಮಿ ತುಷಾರ- ಬಿಂದು-ನಿಃಸ್ಸಾರಣೇನ ಪುಷ್ಟಾಃ ಕರೋಮಿ' *(ಭಟ್ಟಾಚಾರ್ಯ, ಭಾ-೧೮, ಪು. ೫೬೯)* – ನೀರಿನ ರೂಪನಾದ ಚಂದ್ರನಾಗಿ ಎಲ್ಲ ಸಸ್ಯಗಳನ್ನು ಬತ್ತ ಜವೆ ಮುಂತಾದುವನ್ನು, ಹಿಮದ ಹನಿಯನ್ನು ಮೂಡಿಸಿ ಪೋಷಿಸುತ್ತೇನೆ ಎನ್ನುತ್ತಾರೆ.

## ೧೪. ಉಪಸಂಹಾರ

ಹೀಗೆ, ವಿಸ್ತಾರವಾಗಿ ಬೆಳೆದುಕೊಂಡಿವೆ ಗೀತಾ ವ್ಯಾಖ್ಯಾನಗಳು. ಮಹಾತ್ಮರಾದ ವ್ಯಾಖ್ಯಾನಕಾರರು, ಓದಿದಷ್ಟೂ ತನ್ನೆಡೆಗೆ ಸೆಳೆಯುವಂಥ ಶಾಸ್ತ್ರಾರ್ಥಗಳನ್ನು ಹೆಣೆದು ಉದ್ಗ್ರಂಥಗಳನ್ನು ರಚಿಸಿ ಮನುಕುಲಕ್ಕೆ ನೆರವು ನೀಡಿದ್ದಾರೆ. ವ್ಯಾಖ್ಯಾ ಸಹಿತವಾದ ಮೂಲ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡುತ್ತ ಹಗಲು-ಇರುಳುಗಳನ್ನು ಒಂದುಗೂಡಿಸಿ ಆ ಚಿಂತನೆಯಲ್ಲೇ ನೆಲೆಸಿರುವಂತಾಗಬೇಕು. ಮತ್ತು ಓದಿದ್ದನ್ನು ಮೈಗೂಡಿಸಿಕೊಳ್ಳುವುದನ್ನು ಕಲಿಯಬೇಕು. ಓದಿ ಓದಿ ಕೂಚು ಭಟ್ಟ ಎನ್ನುವಂತಾಗಬಾರದು. ಆದ್ದರಿಂದಲೇ, '**ತೇಜಸ್ವಿ ನಾವಧೀತಮಸ್ತು**' – 'ನಾವು ಓದಿದ್ದು ತೇಜಸ್ವಿಯಾಗಲಿ' ಎಂದು ಪ್ರಾರ್ಥಿಸಲಾಗಿದೆ ವೇದಗಳಲ್ಲಿ. ಸದಾ ನಮ್ಮಲ್ಲಿ ಶಾಸ್ತ್ರಾರ್ಥ ಶುದ್ಧವಾದ ರೀತಿಯಲ್ಲಿ ಸ್ಫುರಿಸಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸೋಣ.

### *ಸಂಕ್ಷೇಪಾಕ್ಷರಗಳ ಸೂಚಿ*

ಸಂ. = ಸಂಪಾದಕರು ; ಅನು. = ಅನುವಾದಕರು

ವ್ಯಾ.. = ವ್ಯಾಖ್ಯಾನಕಾರರು ; ಭಾ. = ಭಾಗ/ ಸಂಪುಟ

ಪು. = ಪುಟ ; ಪುಪು. = ಪುಟದಿಂದ ಪುಟ


### *ಆಶ್ರಿತ ಗ್ರಂಥ ಸೂಚಿ*

#### ೧) ಇಂಟರ್ನೆಟ್ ಮೂಲಗಳು

*advaita-vedanta.org - https://www.advaita-vedanta.org /archives/advaita-l/2005-April/014476.html (೨೫ ನವೆಂಬರ್ ೨೦೨೧, ೨ ಘಂಟೆ ಅಪರಾಹ್ಣ, IST ಕಲ್ಕತ್ತಾ, ಭಾರತ)*

*advaitasharada - https://advaita sharada. sringeri.net/ (೨೫ ನವೆಂಬರ್ ೨೦೨೧, ೬.೩೦ ಘಂಟೆ ಸಂಜೆ, IST ಕಲ್ಕತ್ತಾ, ಭಾರತ)*

*kamakoti.org - https://www.kamakoti.org/ kamakoti/articles/Preceptors of Advaita - 28.html (೨೬ ನವೆಂಬರ್ ೨೦೨೧, ೪ ಘಂಟೆ ಸಂಜೆ, IST ಕಲ್ಕತ್ತಾ, ಭಾರತ)*

*minkowski - https://www.india-seminar.com/2010/608/60_c_minkowski. htm (೨೪ ನವೆಂಬರ್ ೨೦೨೧, ೩.೨೫ ಘಂಟೆ ಅಪರಾಹ್ಣ, IST ಕಲ್ಕತ್ತಾ, ಭಾರತ)*

*speakingtree.in - https://www.speakingtree.in/blog/45-commentaries-on-bhaga-vad-gita-195895 (೨೩ ನವೆಂಬರ್ ೨೦೨೧, ೧೦.೪೦ ಘಂಟೆ ರಾತ್ರಿ , IST ಕಲ್ಕತ್ತಾ, ಭಾರತ)*

*wikipedia.org- https://en.wikipedia.org/ wiki/Bhagavad_Gita (೨೩ ನವೆಂಬರ್ ೨೦೨೧, ೫.೩೦ ಘಂಟೆ ರಾತ್ರಿ , IST ಕಲ್ಕತ್ತಾ, ಭಾರತ)*

#### ೨) ಪುಸ್ತಕ ಮೂಲಗಳು

*ಆದಿದೇವಾನಂದ, ಸ್ವಾಮೀ. ಅನು., **ಶ್ರೀರಾಮಾನುಜ ಗೀತಾ ಭಾಷ್ಯ.** ಶ್ರೀರಾಮಕೃಷ್ಣ ಮಠ, ಮದ್ರಾಸು.*

*ಗಂಭೀರಾನಂದ, ಸ್ವಾಮಿ., ಅನು., **ಭಗವದ್ಗೀತಾ (ಗೂಢಾರ್ಥ ದೀಪಿಕಾ ಸಹಿತ)** (ಆಂಗ್ಲ), ಅದ್ವೈತ ಆಶ್ರಮ, ಕಲ್ಕತ್ತಾ, ೨೦೦೭ ದ್ವಿತೀಯ ಮುದ್ರಣ (೧೯೯೮ ಪ್ರಥಮ ಸಂಸ್ಕರಣ).*

*ಗೀತಾ = ದ್ರವಿಡ, ಮಣಿ . ಸಂ., **ಶ್ರೀಮದ್ಭಗವದ್ಗೀತಾ ಭಾಷ್ಯಮ್.** ೧, ೨ ಖಂಡ. ಶ್ರೀದಕ್ಷಿಣಾಮೂರ್ತಿ ಮಠ ಪ್ರಕಾಶನ. ವಾರಾಣಸೀ. ೨೦೧೫ ಮೊದಲನೇ ಸಂಸ್ಕರಣ.*

*ಝಳಕೀಕರ, ಭೀಮಾಚಾರ್ಯ. **ನ್ಯಾಯಕೋಶಃ.** ಚೌಖಂಬಾ ಸುರಭಾರತೀ ಪ್ರಕಾಶನಮ್. ವಾರಾಣಸೀ. ೨೦೦೭ ಸಂಸ್ಕರಣ.*

*ಪಣಸೀಕರ, ವಾಸುದೇವ ಲಕ್ಷ್ಮಣ ಶಾಸ್ತ್ರೀ. ಸಂ., **ಶ್ರೀಮದ್ಭಗವದ್ಗೀತಾ,** ಚೌಖಂಬಾ ಸಂಸ್ಕೃತ ಪ್ರತಿಷ್ಠಾನ, ದಿಲ್ಲೀ, ೧೯೯೯ ಪುನರ್ಮುದ್ರಿತ ಸಂಸ್ಕರಣ.*

*ಪಾಂಡುರಂಗಿ, ಕೆ.ಟಿ., ಕೃಷ್ಣಾಚಾರ್ಯ ಉಪಾಧ್ಯಾಯ. ಸಂ., **ಗೀತಾತಾತ್ಪರ್ಯನಿರ್ಣಯಃ.,** ೧,೨ ಸಂಪುಟಗಳು, ದ್ವೈತ ವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನ, ಬೆಂಗಳೂರು, ೨೦೦೭*

*ಭಟ್ಟಾಚಾರ್ಯ, ಹರಿದಾಸ ಸಿದ್ಧಾಂತ ವಾಗೀಶ., ಸಂ, ವ್ಯಾ., ಅನು., **ಮಹಾಭಾರತಮ್,** ೧-೪೩ ಖಂಡಗಳು, ವಿಶ್ವವಾಣೀ ಪ್ರಕಾಶನೀ, ಕಲ್ಕತ್ತಾ, ೧೯೮೦ ಎರಡನೇ ಸಂಸ್ಕರಣ (೧೯೩೫ ಮೊದಲ ಸಂಸ್ಕರಣ)*

*ಮಿಶ್ರ,ಕಮಲ. ಸಂ., **ಶ್ರೀಮದ್ಭಗವದ್ಗೀತಾ** (೨೧ ವ್ಯಾಖ್ಯಾನಗಳೊಂದಿಗೆ), ಧರ್ಮಾರ್ಥ ಟ್ರಸ್ಟ, ಜಮ್ಮು ಕಾಶ್ಮೀರ, ಮತ್ತು ಮೋತಿಲಾಲ್ ಬನಾರಸಿದಾಸ ಪಬ್ಲಿಕೇಶನ್ಸ, ನವ ದೆಹಲಿ, ೨೦೨೧ ಪ್ರಥಮ ಸಂಸ್ಕರಣ.*

*ಸಾಧಳೇ, ಗಜಾನನ ಶಂಭು., ಸಂ., **ಶ್ರೀಮದ್ಭಗವದ್ಗೀತಾ** (ಶಾಂಕರಭಾಷ್ಯಾದಿ ಹನ್ನೊಂದು ವ್ಯಾಖ್ಯಾಸಹಿತ), ೧-೩ ಭಾಗಗಳು, ಪರಿಮಲ ಪಬ್ಲಿಕೇಶನ್ಸ್, ದಿಲ್ಲೀ, ೨೦೧೦ ಸಂಸ್ಕರಣ.*